ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 28 ಜುಲೈ 8, 1984 ಬೆಲೆ 60 ಪೈಸೆ.

ಸಿ. ಪಿ. ಐ. [ಎಂ] ಪೊಲಿಟ್‌ಬ್ಯೂರೋ ಖಂಡನೆ

ಸಂವಿಧಾನ ಬದ್ಧವಾಗಿ ಚುನಾಯಿತಗೊಂಡ ಜಮ್ಮು ಮತ್ತು ಕಾಶ್ಮೀರದ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ಸರಕಾರವನ್ನು ವಜಾಮಾಡಿ ಕಾಂಗ್ರೆಸ್ (ಐ) ಬೆಂಬಲಿತ ಪಕ್ಷಾಂತರಿಗಳ ಅಲ್ಪ ಮತದ ಸರಕಾರವನ್ನು ರಚಿಸಲು ಅವಕಾಶ ನೀಡಿದ ಜಮ್ಮು ಕಾಶ್ಮೀರದ ರಾಜ್ಯಪಾಲ ಜಗಮೋಹನ್ ಅವರ ಕೃತ್ಯವನ್ನು ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ಖಂಡಿಸಿದೆ.

ಡಾ. ಅಬ್ದುಲ್ಲಾ ಅವರ ಸರಕಾರ ಬಹುಮತ ಕಳೆದುಕೊಂಡಿದೆ ಎಂಬುದನ್ನು ಸದನದಲ್ಲೇ ತೀರ್ಮಾನಿಸುವಂತಹ ಕ್ರಮವನ್ನು ರಾಜ್ಯಪಾಲರು ಕೈಗೊಳ್ಳದೆ, ಉದ್ದೇಶ ಪೂರ್ವಕವಾಗಿಯೇ ಸರಕಾರವನ್ನು ವಜಾ ಮಾಡಿದ್ದಾರೆ. ಇದು ಅವರು ಕಾಂಗ್ರೆ ಪಕ್ಷದ ನಿಷ್ಠಾವಂತ ಉಪಕರಣ ವೆಂಬುದನ್ನು ಬಹಿರಂಗ ಗೊಳಿಸಿದೆ.

ಇಂತಹ ಸಂವಿಧಾನ ವಿರೋಧೀ ಕೃತ್ಯವನ್ನು ಆಳುವ ಪಕ್ಷದ ಸರ್ವಾಧಿಕಾರೀವರ್ತನೆಯ ಒಂದು ಭಾಗ ಎಂಬುದಾಗಿ ಪೊಲಿಟ್ ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಫರೂಕ್ ಅಬ್ದುಲ್ಲಾ ಅವರ ಸರ್ಕಾರವನ್ನು ಉರುಳಿಸಲು ನ್ಯಾಶನಲ್ ಕಾನ್ಫರೆನ್ಸ್ ಪಕ್ಷದೊಳಗೆ ಪಕ್ಷಾಂತರವನ್ನು ಪ್ರೋತ್ಸಾಹಿಸಿ ಅದನ್ನು ಸಂಘಟಿಸಿದ್ದು ಕಾಂಗ್ರೆಯ ಅತ್ಯಂತ ನಾಚಿಕೆ ಗೇಡಿನ ಹಾಗೂ ಖಂಡನಾರ್ಹ ಸಂಗತಿ.

ಕಾಂಗ್ರೆಸ್ಸೇತರ ಸರಕಾರಗಳನ್ನು ಹಿಂದಿನ ರಾಜ್ಯ ಪಾಲರುಗಳು ಉರುಳಿಸಿದಾಗ ವ್ಯಕ್ತಗೊಂಡ ವಿರೋಧ, ಖಂಡನೆಗಳೇ ಈಗ ಜಮ್ಮು ಕಾಶ್ಮೀರ ಸರ್ಕಾರ ಉರುಳಿಸಿದಾಗಲೂ ವ್ಯಾಪಕವಾಗಿ ವ್ಯಕ್ತಗೊಂಡಿರುವುದಕ್ಕೆ ಪಿ. ಬಿ. ತನ್ನ ಸಂತಸವನ್ನು ವ್ಯಕ್ತಪಡಿಸಿದೆ. ಕಾಂಗ್ರೆಯ ಅನೇಕ ನಿಷ್ಠಾವಂತ ಕಾರ್ಯಕರ್ತರುಗಳೇ ಈ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಗೊಳಿಸುತ್ತಿದ್ದಾರೆ. ಇದು ಒಂದು ಏಕೀಕೃತ ಪ್ರತಿಭಟನಾ ಚಳವಳಿಯಾಗಿ ಬೆಳೆಯುವುದೆಂಬ ಆಶಾ ಭಾವನೆಯನ್ನು ಪೊಲಿಟ್ ಬ್ಯೂರೋ ಹೊಂದಿದೆ.

ಜಮ್ಮು-ಕಾಶ್ಮೀರ ಸರ್ಕಾರದ ವಜಾ

ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಕಗ್ಗೊಲೆ

ವಿರೋಧ ಪಕ್ಷಗಳ ಸರಕಾರಗಳನ್ನು ಉರುಳಿಸಿಬಿಡಬೇಕೆಂಬ ಕೇಂದ್ರದ ಕಾಂಗ್ರೆ ಸರಕಾರದ ಕೆರಳಿರುವ ಹುಚ್ಚಿಗೆ ಜಮ್ಮು ಕಾಶ್ಮೀರದ ನ್ಯಾಶನಲ್ ಕಾನ್ಫರೆನ್ಸ್ ಸರಕಾರ ಬಲಿಯಾಗಿದೆ. ಇತ್ತೀಚೆಗಷ್ಟೇ ಸಿಕ್ಕಿಂ ಸರಕಾರವನ್ನು ಆಹುತಿ ತೆಗೆದುಕೊಂಡ ಸಂಗತಿ ಜನಮನದಿಂದ ಅಳಿಸಿಹೋಗುವ ಮೊದಲೇ ಮತ್ತೊಂದು ವಿರೋಧಿ ಸರಕಾರ ಉರುಳಿಸಿದ ಕಾಂಗ್ರೆ ಪಕ್ಷದ ಮುಂದಿನ ಬಲಿ ಯಾವ ಸರಕಾರವೋ ಗೊತ್ತಿಲ್ಲ. ಕಾಂಗ್ರೆ ಪಕ್ಷದ ಸರ್ವಾಧಿಕಾರದ ಬಾಹುಗಳು ವಿಸ್ತರಿಸುವುದನ್ನು ನಮ್ಮ ನಾಡಿನ ಜನತೆ ತಡೆಯದೇ ಹೋದ ಪಕ್ಷದಲ್ಲಿ ದೇಶ ಮತ್ತೊಮ್ಮೆ "ತುರ್ತು ಪರಿಸ್ಥಿತಿ"ಗೆ ಒಳಗಾಗಬೇಕಾಗುತ್ತದೆಂಬುದರಲ್ಲಿ ಯಾವುದೇ ಸಂಶಯ ಉಳಿದಿಲ್ಲ.

77 ಸದಸ್ಯತ್ವವುಳ್ಳ ಜಮ್ಮು ಕಾಶ್ಮೀರ ವಿಧಾನಸಭೆಯಲ್ಲಿ ಆಡಳಿತಾರೂಢ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ 12 ಮಂದಿ ಸದಸ್ಯರು ತಮ್ಮ ಬೆಂಬಲವನ್ನು ವಾಪಸ್ ಪಡೆದುಕೊಂಡಿದ್ದರಿಂದ, ಫರೂಕ್ ಅಬ್ದುಲ್ಲಾ ಸರಕಾರ ಬಹುಮತ ಕಳೆದುಕೊಂಡಿತೆಂದೂ, ಬೆಂಬಲ ವಾಪಸ್ ಪಡೆದ 12 ಮಂದಿ ಭಿನ್ನ ಮತೀಯರಿಗೆ ಗುಲಾಂ ಮಹಮ್ಮದ್ ಷಾ ನಾಯಕತ್ವ ನೀಡಿದರೆಂದೂ ಇವರಿಗೆ ಕಾಂಗ್ರೆಯ 26 ಶಾಸಕರು ಬೆಂಬಲ ನೀಡಿರುವುದಾಗಿ ಹೇಳಿ ಜಮ್ಮು ಕಾಶ್ಮೀರದ ರಾಜ್ಯಪಾಲ ಜಗಮೋಹನ್ ಅವರು ಫರೂಕ್ ಅಬ್ದುಲ್ಲಾ ಸರಕಾರವನ್ನು ವಜಾ ಮಾಡಿ, ಪಕ್ಷಾಂತರಿಗಳು ಸರಕಾರ ರಚಿಸಲು ಅನುವು ಮಾಡಿಕೊಟ್ಟಿದ್ದಾರೆ.

ಜಮ್ಮು ಕಾಶ್ಮೀರ ರಾಜ್ಯದ ಪಕ್ಷಾಂತರ ನಿಷೇಧ ಕಾಯಿದೆಯನ್ವಯ ಪಕ್ಷಾಂತರ ಮಾಡಿದ 12 ಮಂದಿ ಭಿನ್ನ ಮತೀಯ ಶಾಸಕರಿಗೆ ಮತದಾನದ ಹಕ್ಕು ನೀಡಬಾರದೆಂಬ, ವಿಧಾನ ಸಭೆಯನ್ನು ಕರೆಯಬೇಕೆಂಬ ಅಥವ ವಿಧಾನ ಸಭೆಯನ್ನು ವಿಸರ್ಜಿಸಬೇಕೆಂದು ಫರೂಕ್ ಅಬ್ದುಲ್ಲಾ ಅವರು ಮಾಡಿಕೊಂಡಿದ್ದ ಮನವಿ ಅತ್ಯಂತ ಸಮಂಜಸವಾಗಿದ್ದರೂ ಕೂಡ ರಾಜ್ಯಪಾಲ ಜಗಮೋಹನ್ ಅವರು ಅದನ್ನು ನಿರಾಕರಿಸಿ ಕಾಂಗ್ರೆಯ ಏಜೆಂಟರಾಗಿ ವರ್ತಿಸಿ ರಾಜ್ಯಪಾಲರ ಸ್ಥಾನಮಾನದ ಪರಿಕಲ್ಪನೆಯನ್ನೇ ನಾಶ ಮಾಡಿದ್ದಾರೆ.

ಇಂತಹ ಸರಕಾರ ಉರುಳಿಸುವ ಕ್ರಮಗಳನ್ನು ಕಾಂಗ್ರೆಸ್ಸಿನವರು ಬಹಳ ಕಾಲದ ಹಿಂದೆಯೇ ಪ್ರಾರಂಭಿಸಿದ್ದರು. 1959 ರಲ್ಲಿ ಕೇರಳದಲ್ಲಿ ಅಧಿಕಾರದಲ್ಲಿದ್ದ ಕಮ್ಯೂನಿಸ್ಟ್ ಮಂತ್ರಿಮಂಡಲವನ್ನು ಬಹುಮತವಿದ್ದ ಪಕ್ಷದಲ್ಲೂ ಕೂಡ ವಜಾ ಮಾಡಲಾಗಿತ್ತು. 1967 ರಲ್ಲಿ ಪ. ಬಂಗಾಲ ಸರ್ಕಾರವನ್ನು ಇದೇ ರೀತಿಯಲ್ಲಿ ವಜಾ ಮಾಡಲಾಗಿತ್ತು. ಹೀಗೆಯೇ ಇನ್ನೂ ಅನೇಕ ಸರಕಾರಗಳನ್ನು ವಜಾ ಮಾಡಲಾಗಿದೆ.

ಪಾರ್ಲಿಮೆಂಟರೀ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳಿಗೆ ಸದ್ಯಕ್ಕೆ ಇರುವ ಕನಿಷ್ಠ ಹಕ್ಕುಗಳನ್ನು ಸಹ ಮೊಟಕುಗೊಳಿಸಲು ಕಾಂಗ್ರೆ ಪಕ್ಷವು ಯೋಜಿತ ರೀತಿಯಲ್ಲಿ ನಡೆಸುತ್ತಿರುವ ಪ್ರಯತ್ನಗಳನ್ನು ಈ ಘಟನೆಗಳು ಪ್ರತಿ ಫಲಿಸುತ್ತವೆ.

ಒಂದು ಪಕ್ಷದ ಬಹುಮತವನ್ನು ಯಾವಾಗಲೂ ವಿಧಾನ ಸಭೆಯ ಒಳಗೆ ಪರೀಕ್ಷಿಸಬೇಕಾಗುತ್ತದೆ. ಒಂದು ವೇಳೆ ಬೇರೆ ಪಕ್ಷಕ್ಕೆ ಬಹುಮತ ವಿರುವುದು ಕಂಡು ಬಂದಲ್ಲಿ ಕೂಡಲೇ ಹೊಸ ಚುನಾವಣೆಗೆ ಆಜ್ಞೆ ಮಾಡಬೇಕಾಗುತ್ತದೆ. ಆದರೆ ಇದ್ಯಾವುದನ್ನು ಅನುಸರಿಸದ ರಾಜ್ಯಪಾಲ ಜಗಮೋಹನ್ ಅವರು ಹೊಸ ಮುಖ್ಯಮಂತ್ರಿ ಗುಲಾಂ ಮಹಮದ್ ಷಾ ಅವರಿಗೆ ತಮ್ಮ ಬಹುಮತವನ್ನು ನಿರೂಪಿಸಲು ಒಂದು ತಿಂಗಳ ಕಾಲಾವಕಾಶ ನೀಡಿದ್ದಾರೆ.

ಬಹುಮತವನ್ನು ನಿರೂಪಿಸಲು ಒಂದು ತಿಂಗಳ ಕಾಲಾವಕಾಶ ಏಕೆಂದು ಅರ್ಥವಾಗುವುದಿಲ್ಲ, ಅಧಿಕಾರ ಪದವಿಗಳ ಆಮಿಷ ತೋರಿಸಿ ಮತ್ತಷ್ಟು ಶಾಸಕರನ್ನು ಸೆಳೆದುಕೊಳ್ಳಲು ಹೂಡಿದ ಹುನ್ನಾರವಿರಬಹುದೆ ?

ಕಳೆದ ವರ್ಷ ಪಾಂಡಿಚೇರಿಯ ಡಿ. ಎಂ. ಕೆ. ಸರಕಾರ ಇಂಥದೇ ಪರಿಸ್ಥಿತಿಯಲ್ಲಿದ್ದಾಗ ಇದೇ ಕಾಂಗ್ರೆ ಸರಕಾರ ಕಾಲಾವಕಾಶ ನೀಡಲು ನಿರಾಕರಿಸಿ ಬಹುಮತವಿದ್ದ ಸರಕಾರವನ್ನು ವಜಾ ಮಾಡಿ ಒಂದುವರ್ಷಕ್ಕೂ ಹೆಚ್ಚು ಕಾಲದಿಂದ ಅಲ್ಲಿ ರಾಜ್ಯಪಾಲರ ಆಡಳಿತವನ್ನು ಮುಂದುವರೆಸಿಕೊಂಡು ಬರುತ್ತಿದೆ.

ಸಂವಿಧಾನ ಬದ್ಧವಾಗಿ ಆಯ್ಕೆಯಾಗಿದ್ದ ಜಮ್ಮು ಕಾಶ್ಮೀರ ಸರಕಾರವನ್ನು ಉರುಳಿಸಿದ್ದನ್ನು ಪ್ರತಿಭಟಿಸಿ ದೇಶಾದ್ಯಂತ ವ್ಯಾಪಕ ಪ್ರಮಾಣದಲ್ಲಿ ಪ್ರತಿಭಟನೆ ವ್ಯಕ್ತವಾಗಿದೆ.

ಪಾರ್ಲಿಮೆಂಟರೀ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯವನ್ನು ಒಡ್ಡುತ್ತಿರುವ ಕಾಂಗ್ರೆಯ ನಿರ್ಲಜ್ಜ ವರ್ತನೆಗಳು ಪ್ರತಿಯೊಬ್ಬ ಪ್ರಜಾ ಪ್ರಭುತ್ವ ಪ್ರೇಮಿಯನ್ನೂ ಚಿಂತೆಗೀಡು ಮಾಡಿದೆ.

ಕಾಂಗ್ರೆಯ ವಿರೋಧಿ ಸರ್ಕಾರಗಳನ್ನು ಉರುಳಿಸುವ ಆಟಕ್ಕೆ ಕರ್ನಾಟಕದ ಜನತಾ ಸರಕಾರವೂ ಬಲಿಯಾದರೆ ಆಶ್ಚರ್ಯವಿಲ್ಲ. ಕಾಂಗ್ರೆ ಸರಕಾರ ಅನುಸರಿಸುತ್ತಿರುವ ಅಧಿಕಾರ ಶಾಹೀ ಧೋರಣೆಗಳ ವಿರುದ್ಧ ಪ್ರಬಲವಾದ ಪ್ರಜಾಪ್ರಭುತ್ವ ಚಳವಳಿಯನ್ನು ಸಂಘಟಿಸಿ ಹೋರಾಟ ನಡೆಸಬೇಕಾಗಿದೆ. ವಿರೋಧ ಪಕ್ಷಗಳ ಸರಕಾರಗಳಿಗೆ ಮಾರಕವಾಗಿ ಪರಿಣಮಿಸುತ್ತಿರುವ ಶಕ್ತಿಗಳ ವಿರುದ್ಧ ಜನತೆಯನ್ನು ಜಾಗೃತ ಗೊಳಿಸಬೇಕಾಗಿದೆ.

ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯ ಆಹ್ವಾನಿತರಾಗಿ

ಕಾ. ಪಿ. ರಾಮಚಂದ್ರರಾವ್ ಆಯ್ಕೆ

ಜೂನ್ 17 ರಿಂದ 20ರ ವರೆಗೆ ನವದೆಹಲಿಯಲ್ಲಿ ನಡೆದ ಸಿ. ಪಿ. ಐ. (ಎಂ) ನ ಕೇಂದ್ರ ಸಮಿತಿಯ ಸಭೆಯು, ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿಯೂ ಶಾಸಕರೂ ಹಾಗು ನಮ್ಮ ಪತ್ರಿಕೆಯ ಸಂಪಾದಕರೂ ಆದ ಕಾ. ಪಿ. ರಾಮಚಂದ್ರ ರಾವ್ ಅವರನ್ನು ಕೇಂದ್ರ ಸಮಿತಿಯ ಖಾಯಂ ಆಹ್ವಾನಿತರನ್ನಾಗಿ ಆಯ್ಕೆಮಾಡಿದೆ.

ಪೊಲಿಟ್ ಬ್ಯೂರೋದಲ್ಲಿ ಕಾ. ಪ್ರಮೋದ ದಾಸ್ ಗುಪ್ತಾ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ತ್ರಿಪುರಾದ ಮುಖ್ಯಮಂತ್ರಿ ಕಾ. ನೃಪೇನ್ ಚಕ್ರವರ್ತಿ ಅವರನ್ನು ಆಯ್ಕೆ ಮಾಡಿದೆ.

ಕೇಂದ್ರ ಸಮಿತಿಯಲ್ಲಿ ತಮಿಳುನಾಡಿನ ಕಾ. ಎಂ. ಆರ್. ವೆಂಕಟರಾಮನ್ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಕಾ. ಎನ್. ರಾಮರಾಜ್ ಅವರನ್ನು ಸೇರಿಸಿಕೊಂಡಿದೆ.

ಇದಲ್ಲದೆ ಈಗ ಪ್ರಾತಿನಿಧ್ಯವಿಲ್ಲದ ಮಧ್ಯಪ್ರದೇಶ, ರಾಜಸ್ಥಾನ, ದೆಹಲಿ ಮತ್ತು ಜಮ್ಮು ಕಾಶ್ಮೀರದ ರಾಜ್ಯ ಕಾರ್ಯದರ್ಶಿಗಳನ್ನು ಸಹ ಖಾಯಂ ಆಹ್ವಾನಿತರನ್ನಾಗಿ ಆಯ್ಕೆ ಮಾಡಿದೆ. ಅಲ್ಲದೆ ಇನ್ನೂ 20 ಆಹ್ವಾನಿತರನ್ನು ಆಯ್ಕೆ ಮಾಡಲು ಸೂಚನೆಗಳನ್ನು ನೀಡುವಂತೆ ರಾಜ್ಯ ಸಮಿತಿಗಳನ್ನು ಕೇಂದ್ರ ಸಮಿತಿಯು ಕೇಳಿಕೊಂಡಿದೆ. ಈ 25 ಹೊಸ ಆಹ್ವಾನಿತರು ಕೇಂದ್ರ ಸಮಿತಿಯ ಮುಂದಿನ ಸಭೆಯಿಂದಲೇ ಹಾಜರಾಗಲಿದ್ದಾರೆ.

— ಎನ್ಕೆ

ಭಾರತ ದರ್ಶನ

ಇಂದಿರಾ ಆಡಳಿತೆಯಲ್ಲಿ........

ಉತ್ತರ ಪ್ರದೇಶ ದರೋಡೆಖೋರರ ರಾಜ್ಯವಿದ್ದಂತೆ ಬಿಹಾರದಲ್ಲಿ ಭೂಮಾಲಿಕರದ್ದೇ ಆಡಳಿತ ಮುಂದುವರಿದಿದೆ. ಗ್ರಾಮಾಂತರ ಪ್ರದೇಶಗಳಲ್ಲಷ್ಟೇ ಅಲ್ಲ ಪಾಟ್ನಾದಲ್ಲಿ ಕೂಡ ಭೂಮಾಲಕರ ಸಂಘದವರು ಅಪಾಯಕಾರಿ ಬಂದೂಕು, ಪಿಸ್ತೂಲ್‌ಗಳನ್ನು ಪ್ರದರ್ಶಿಸುತ್ತ ಮೆರವಣಿಗೆ ತೆಗೆದರೂ ,ರಾಜ್ಯದ ಇಂದಿರಾ ಸರಕಾರ ಅಂಥ ಪ್ರದರ್ಶನಗಳಿಗೆ ಪ್ರತಿರೋಧ ವ್ಯಕ್ತ ಮಾಡುತ್ತಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಹರಿಜನ ಗಿರಿಜನ, ಕೃಷಿ ಕಾರ್ಮಿಕರ ಮೇಲೆ ದಿನನಿತ್ಯ ಅತ್ಯಾಚಾರ ಮುಂದೆ ಸಾಗುತ್ತಲೇ ಇದೆ. ಪಲಮು ಜಿಲ್ಲೆಯ ಜರ್ಗಾಡ ಹಳ್ಳಿಯಲ್ಲಿ ಮ ಜ ದೂರ ಕಿಸಾನ್ ಸಂಗ್ರಾಮ ಸಮಿತಿ ಸಂಘಟಿಸಿದ ಕೃಷಿ ಕಾರ್ಮಿಕರ-ಹರಿಜನರ ಸಮಾವೇಶದ ಮೇಲೆ ಜೂನ್ 17 ರಂದು ಭೂ ಮಾಲಕರ ಗೂಂಡಾಗಳು ಹಲ್ಲೆ ಮಾಡಿ ಹಲವಾರು ಜನರನ್ನು ಕೊಂದು, ನೂರಾರು ಜನರನ್ನು ಘಾಯಗೊಳಿಸಿದ್ದಾರೆ. ಸಮಿತಿಯ ಕಾರ್ಯದರ್ಶಿ ಕೃಷ್ಣಸಿಂಗ್ ಸ್ಥಳದಲ್ಲೇ ಮೃತರಾದರು. ಇಂಥ ಹೃದಯದ್ರಾವಕ ಘಟನೆ ನಡೆದ 2 ಗಂಟೆಯನಂತರ ಪೋಲೀಸರು ಗ್ರಾಮಕ್ಕೆ ಬಂದು ಭೂ ಮಾಲಕರನ್ನೂ ಅವರ ಗೂಂಡಾ ಜನರನ್ನೂ ಬಂಧಿಸದೆ ಕೃಷಿ ಕಾರ್ಮಿಕರನ್ನೂ, ಹರಿಜನರನ್ನೂ ಬಂಧಿಸಿದರು. ಬಡ ಜನರ ಮೇಲೆ ಅಮಾನುಷ ಅತ್ಯಾಚಾರ ಮಾಡಿದ ಭೂ ಮಾಲಕರೇ ಮೊದಲು ಪೋಲೀಸರಿಗೆ ತಕರಾರು ಕೊಟ್ಟಿದ್ದಾರೆ. ಕೈಕಾಲು ಮುರಿದುಕೊಂಡು, ಕೆಲವರನ್ನು ಕಳೆದುಕೊಂಡ ಬಡವರು ತಡವಾಗಿ ಅರ್ಜಿ ಸಲ್ಲಿಸಿದರು. ಕೆಲವು ಭೂ ಮಾಲಕರ ಹೆಸರುಗಳನ್ನು ಬರೆಸಿದರೂ ಕೂಡ ಹರಿಜನ-ಗಿರಿಜನರೇ ಬಂಧನಕ್ಕೊಳಗಾದರಲ್ಲದೆ, ಪೋಲೀಸರು ಭೂ ಮಾಲಿಕರಿಗೆ ರಕ್ಷಣೆ ನೀಡಿ ತಾವೂ ಬಡವರ ಮೇಲಿನ ದಬ್ಬಾಳಿಕೆಯಲ್ಲಿ ಶಾಮೀಲಾದರು.

ಭೂ ಮಾಲಕರ ಬೆಂಬಲದಿಂದ ಆಳಲ್ಪಡುವ ಇಂದಿರಾ ಸರಕಾರವನ್ನು ಎದುರಿಸ ಬೇಕಾದರೆ, ಉರುಳಿಸ ಬೇಕಾದರೆ ಬಲಿಷ್ಟವಾದ ಕೃಷಿ ಕಾರ್ಮಿಕರ ಸಂಘಟನೆಯೂ, ಶ್ರಮಜೀವಿ ವರ್ಗದ ಮುಖಂಡತ್ವದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಗತ್ಯ.

ಎನ್ರಿಕೋ ಬರ್ಲಿಂಗರ್ ನಿಧನಕ್ಕೆ ಶ್ರದ್ಧಾಂಜಲಿ

ಇಟಲಿಯನ್ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಯಾಗಿದ್ದ ಕಾಮ್ರೇಡ್ ಎನ್ರಿಕೋ ಬರ್ಲಿಂಗರ್ ಅವರ ನಿಧನಕ್ಕೆ ಸಿ. ಪಿ. ಐ. (ಎಂ) ನ ಕೇಂದ್ರ ಸಮಿತಿ ತನ್ನ ಆಳವಾದ ಶೋಕವನ್ನು ವ್ಯಕ್ತಪಡಿಸಿದೆ.

ಫ್ಯಾಸಿಸಂನ ವಿರುದ್ಧ ನಡೆದ ಹೋರಾಟದಲ್ಲಿ ಭಾಗವಹಿಸಿದ ಅವರು ನಂತರ ಇಟಾಲಿಯನ್ ಯೂನಿಯನ್ ಆಫ್ ಕಮ್ಯೂನಿಸ್ಟ್ ಯೂತ್‌ನ ಪ್ರಧಾನ ಕಾರ್ಯದರ್ಶಿಯೂ, ಪಾರ್ಟಿ ಸ್ಕೂಲ್‌ನ ನಿರ್ದೇಶಕರೂ ಪಕ್ಷದ ಕೇಂದ್ರ ಸಮಿತಿಯ ಸಂಘಟನಾ ಇಲಾಖೆಯ ಮುಖ್ಯಸ್ಥರೂ ಆಗಿ ಕೆಲಸ ನಿರ್ವಹಿಸಿದ ಇವರು ನಂತರ 1972 ರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಅಂದಿನಿಂದ ಜೂನ್ 11, 1984 ರ ಅವರ ನಿಧನದವರೆಗೆ ಸಮಾಜವಾದೀ ಜಗತ್ತಿನಿಂದಾಚೆಗಿನ ಒಂದು ದೊಡ್ಡ ಕಮ್ಯೂನಿಸ್ಟ್ ಪಕ್ಷದ ನೇತಾರರಾಗಿದ್ದರು. ಇವರ ನೇತೃತ್ವದಲ್ಲಿ ಇಟಾಲಿಯನ್ ಕಮ್ಯೂನಿಸ್ಟ್ ಪಕ್ಷವು, ಪಕ್ಷವನ್ನು ಪ್ರಜಾಪ್ರಭುತ್ವ ಚಳವಳಿಯಿಂದ ಬೇರ್ಪಡಿಸುವ ಅನೇಕ ಸಂಯುಕ್ತ ಸಂಸ್ಥಾನದ ಸಾಮ್ರಾಜ್ಯಶಾಹೀ ಒಳಸಂಚಿನ ವಿರುದ್ಧ ಸತತ ಹೋರಾಟ ನಡೆಸಿತು.

ಸಿ. ಪಿ. ಐ. [ಎಂ] ನ ಕೇಂದ್ರ ಸಮಿತಿಯು ಕಾಮ್ರೇಡ್ ಬರ್ಲಿಂಗರ್ ಅವರಿಗೆ ತನ್ನ ಕ್ರಾಂತಿಕಾರೀ ಗೌರವಾರ್ಪಣೆ ಮಾಡುತ್ತದೆ. ಅಲ್ಲದೆ ಇಟಾಲಿಯನ್ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಗೆ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಬೆಳಕು ಕಾಣದ ಸೇತುವೆ

ಒರಿಸ್ಸಾ ಮುಖ್ಯಮಂತ್ರಿಯ ಪತ್ನಿ ಲೋಕಸಭೆ ಸದಸ್ಯೆ ಜಯಂತಿ ಪಟ್ನಾಯಕ್ ಮತ್ತು ಕಾನೂನು ಮಂತ್ರಿ ಬಸಂತಕುಮಾರ್ ಬಿಸ್ವಾಲ್ ಇವರೊಳಗಿನ ಜಗಳದಿಂದಾಗಿ ಒರಿಸ್ಸಾದ ಲೂನಾ ನದಿಗೆ ಕಳೆದ ಹತ್ತು ವರ್ಷಗಳಿಂದ ಸೇತುವೆ ಕಾಣದಾಗಿದೆ. ಜನರ ಸೌಲಭ್ಯದ ಸಲುವಾಗಿ ಅಲ್ಲ ಜನತಾ ಮುಖಂಡ ಬಿಜೂ ಪಟ್ನಾಯಕ್ ಅವರ ಪ್ರಭಾವ ಕಡಿಮೆ ಮಾಡುವ ಸಲುವಾಗಿ ಈ ಸೇತುವೆ ನಿರ್ಮಾಣ. ತಂತ್ರಜ್ಞರ ಅಭಿಪ್ರಾಯದಂತೆ ಹತ್ತು ವರ್ಷಗಳ ಹಿಂದೆ ಅಡಿಗಲ್ಲು ಹಾಕಿದ ಪುಬನ್ ಸಾದಲ್ಲೇ ಸೇತುವೆ ಕಟ್ಟಬೇಕಾಗಿದೆ. ಆದರೆ ಮುಖ್ಯಮಂತ್ರಿಯವರ ಪತ್ನಿಯ ಮತಕ್ಷೇತ್ರ 20 ಕಿಲೋಮೀಟರ್ ದೂರದಲ್ಲಿರುವುದರಿಂದ ತಂತ್ರಜ್ಞರ ಅಭಿಪ್ರಾಯಕ್ಕೆ ಬೆಲೆಯಿಲ್ಲ. ಮುಖ್ಯಮಂತ್ರಿಯವರು ತಮ್ಮ ಪತ್ನಿಯ ಒತ್ತಡಕ್ಕೆ ಮಣಿದು ಒಂದೇ ಅಣೆಕಟ್ಟಿಗೆ ಎರಡನೇ ಅಡಿಗಲ್ಲನ್ನಿಟ್ಟಿದ್ದಾರೆ. ಈ ವರ್ಷದ ಬಜೆಟ್ಟಿನಲ್ಲಿ ಈ ಯೋಜನೆಗೆ ಹಣ ತೆಗೆದಿಟ್ಟಿಲ್ಲ. ಆದರೆ ಲೋಕಸಭೆ ಚುನಾವಣೆ ಬರುತ್ತದಲ್ಲ. ಇದೇ ವರ್ಷ ನವೆಂಬರಿನಿಂದ ಈ ಕೆಲಸ ಪ್ರಾರಂಭವಾಗುತ್ತದೆಂದು ಡಂಗುರ ಹೊಡೆಸಿದ್ದಾಯಿತು.

ಮತದಾರರನ್ನು ಒಲಿಸುವ ಸಲುವಾಗಿ ಲೂನಾ ಅಣೆಕಟ್ಟಿನಂತ ಹಲವಾರು ಯೋಜನೆಗಳ ಸುದ್ದಿ ಕೇಳಬಹುದು. ಹಾಗೆಯೇ ಶಾಲೆ, ಬಾವಿ, ಆಸ್ಪತ್ರೆ, ರಸ್ತೆ, ಮೊದಲಾದವುಗಳಿಗಾಗಿ ಕಾಣದ ಕೈಗಳಿಂದ ಹಣವೂ ಬರಬಹುದು. ಚುನಾವಣೆ ಫಲಿತಾಂಶದೊಡನೆ ಅವುಗಳೂ ಕಾಣೆಯಾಗಬಹುದು. ಜನ ಜಾಗೃತರಾಗಿ ಹೋರಾಡುವ ತನಕ, ಮತದಾನ ನೀಡುವಾಗ ಎಚ್ಚರಗೊಳ್ಳುವ ತನಕ ಇಂಥ ಚುನಾವಣಾ ಸ್ಟಂಟ್‌ಗಳು ನಡೆಯುತ್ತಲೇ ಇರುತ್ತವೆ, ತಲೆಕೆಡಿಸಿಕೊಳ್ಳುವುದೇಕೆ ?

ಸಂಘ ಉದ್ಘಾಟನೆ

ಗಂಗಾವತಿ ತಾಲ್ಲೂಕಿನಲ್ಲಿ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘಟನೆಯ ಘಟಕವನ್ನು ಉದ್ಘಾಟಿಸಲಾಯಿತು.

ಗಂಗಾವತಿ ತಾಲ್ಲೂಕಿನಲ್ಲಿ ಕೃಷಿ ಕಾರ್ಮಿಕರ ಮಧ್ಯೆ ಈಗಾಗಲೇ ಕೆಲಸ ಮಾಡುತ್ತಿರುವ ನಲ್ವತ್ತು ಜನ ಮುಖ್ಯ ಕಾರ್ಯಕರ್ತರನ್ನು ಸೇರಿಸಿ ಎಂಟು ಜನರ ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸಿ ಕಾ. ಕೆ. ಬಸವರಾಜ ಅವರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಿ, ಆರು ತಿಂಗಳ ಸಮಯದಲ್ಲಿ ತಾಲ್ಲೂಕಿನಾದ್ಯಂತ ಸದಸ್ಯತ ಚಳುವಳಿಯನ್ನು ನಡೆಸಿ, ತಾಲ್ಲೂಕು ಸಮಾವೇಶವನ್ನು ನಡೆಸಿ, ತಾಲ್ಲೂಕು ಸಮಿತಿಯನ್ನು ಚುನಾಯಿಸಲು ತೀರ್ಮಾನಿಸಲಾಯಿತು.

ಕ್ಯಾನ್ಸರ್‌ಗೆ 6000 ವರ್ಷ

ಕ್ಯಾನ್ಸರ್ ಇಂದು ನಿನ್ನೆ ಬಂದು ಕಾಡುತ್ತಿರುವ ಖಾಯಿಲೆಯೆ ? ಅಲ್ಲ. ಬಹಳ ಹಿಂದಿನಿಂದ ಬಂದುದು ಎಂದು ಸೋವಿಯತ್ ವಿಜ್ಞಾನಿಗಳು ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದೆ. ಈಜಿಪ್ಟಿನ ಪಿರಮಿಡ್‌ಗಳಲ್ಲಿರುವ 'ಮಮ್ಮಿ'ಗಳನ್ನು ಶೋಧಿಸಿದಾಗ ಕ್ಯಾನ್ಸರ್ ರೋಗದ ಚಿಹ್ನೆಗಳಿದ್ದುದು ಕಂಡು ಬಂದಿದೆ. ಸಂಶೋಧಕರ ಅಭಿಪ್ರಾಯದ ಪ್ರಕಾರ ಕ್ಯಾನ್ಸರ್ ವ್ಯಾಧಿ ಸುಮಾರು 6000 ವರ್ಷಗಳ ಹಿಂದಿನಿಂದ ಬಂದದು.

ಕ್ಯಾನ್ಸರ್ ಕಾಯಿಲೆ ಸಾಮಾನ್ಯವಾಗಿ ಮಧ್ಯ ವಯಸ್ಸಿನಲ್ಲಿರುವ ವ್ಯಕ್ತಿಗಳನ್ನು ಸತಾಯಿಸುತ್ತದೆ. ಅಭಿವೃದ್ಧಿಶೀಲ ದೇಶಗಳಲ್ಲಿ 30 ರ ಹರೆಯದೊಳಗಿನ ವ್ಯಕ್ತಿಗಳು ವಿವಿಧ ಬಗೆಯ ಸಾಂಕ್ರಾಮಿಕ ಕಾಯಿಲೆಗಳಿಂದ ಸಾಯುತ್ತಾರೆ. ಅಲ್ಲಿ ಕ್ಯಾನ್ಸರ್ ಕಾಯಿಲೆಯಿಂದ ಸಾಯುವವರ ಸಂಖ್ಯೆ ಕಡಿಮೆಯಾಗಿದೆ ಎನ್ನಬಹುದು.

ಜಠರದ ಕ್ಯಾನ್ಸರ್ ವ್ಯಾಧಿಯೂ ಕಮ್ಮಿಯಾಗಿದೆ. ಆದರೆ ಮಹಿಳೆಯರಲ್ಲಿ ಸ್ತನಗಳ ಕ್ಯಾನ್ಸರ್ ಮತ್ತು ಪುರುಷರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಹೆಚ್ಚಿದೆ. ಶ್ವಾಸಕೋಶದ ಕ್ಯಾನ್ಸರ್ ಪ್ರಮಾಣ ಹೆಚ್ಚಲು ಧೂಮಪಾನ ಕಾರಣವೆನ್ನಬಹುದು. ಧೂಮಪಾನಿಯ ಸಹವಾಸದಲ್ಲಿಯೇ ಯಾವತ್ತೂ ಕಳೆಯಬೇಕಾದ ವ್ಯಕ್ತಿ ಹೊಗೆಬತ್ತಿಯ ಧೂಮವನ್ನು ಆಘ್ರಾಣಿಸುತ್ತಿದ್ದರೆ ಅವನಿಗೂ ಕ್ಯಾನ್ಸರ್ ಅಂಟಿಕೊಳ್ಳುವ ಸಾಧ್ಯತೆಗಳಿವೆ. ಧೂಮಪಾನದ ಅಭ್ಯಾಸವೇ ಇಲ್ಲದ ವ್ಯಕ್ತಿ ಸದಾ ಧೂಮಪಾನ ಮಾಡುವ ವ್ಯಕ್ತಿಗಳಿರುವ ಕೊಠಡಿಯಲ್ಲಿ ಕಳೆಯಬೇಕಾಗಿ ಬಂದಾಗ ಆತನ ಆರೋಗ್ಯದ ಮೇಲೆ ತೀವ್ರ ದುಷ್ಪರಿಣಾಮಗಳಾಗುವ ಸಾಧ್ಯತೆಗಳಿವೆ ಅದು ಕಾರ್ಖಾನೆಗಳು ಮತ್ತು ಸಾರಿಗೆಯ ತೀವ್ರ ಅಭಿವೃದ್ಧಿಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳಿಗಿಂತಲೂ ಘೋರವಾದುದು ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯ ಪಡುತ್ತಾರೆ.

ಕಲ್ಕತ್ತ ಭೂಗತ ರೈಲ್ವೆಯ ದುರಂತ ಕತೆ

ದೇಶದಲ್ಲೇ ಪ್ರಥಮ ಭೂಗತ ರೇಲ್ವೆಯ ಕೆಲಸ ಕಲ್ಕತ್ತ ನಗರದಲ್ಲಿ 1974 ರಲ್ಲೇ ಪ್ರಾರಂಭವಾಗಿತ್ತು. ಅತ್ಯಂತ ನಿಬಿಡವಾದ ಕಲ್ಕತ್ತ ನಗರದ ನಾಗರೀಕ ಸಂಚಾರಕ್ಕೆ ಅನುಕೂಲತೆ ಮಾಡಿಕೊಡುವ ದೃಷ್ಟಿಯಿಂದ ಭೂಗತ ರೇಲ್ವೆ ಕಾರ್ಯ ಪ್ರಾರಂಭಿಸಲಾಗಿತ್ತು. ಆದರೆ ಕಾಂಗ್ರೆಯಲ್ಲಿರುವ ರಾಜಕೀಯ ಗುಂಪುಗಳ ಒಳಜಗಳ ಈ ಮಹತ್ವದ ಕೆಲಸಕ್ಕೆ ಅಡ್ಡಿಯಾಗುತ್ತದೆ. ರೇಲ್ವೆ ಮಂತ್ರಿ ಘನಿಖಾನ್ ಚೌಧರಿ ಮತ್ತು ಅರ್ಥ ಮಂತ್ರಿ ಪ್ರಣಬ್ ಮುಖರ್ಜಿಗಳಿಬ್ಬರೂ ಒಂದಾಗದಿದ್ದರೆ 17 ಕಿ. ಮಿ. ಉದ್ದದ ಭೂಗತ ರೇಲ್ವೆ ಪೂರ್ಣಗೊಳ್ಳಲು ಶಕ್ಯವಿಲ್ಲ. ಮಧ್ಯದ 5 ಕಿ. ಮಿ ಕೆಲಸ ಸ್ಥಗಿತಗೊಂಡಿದೆ. ಇದಕ್ಕೆ ರಾಜಕೀಯ ಕೈವಾಡವೇ ಕಾರಣ.

1983 ಫೆಬ್ರವರಿಯಲ್ಲಿ ಈ ಯೋಜನೆಯ ಒಂದು ಭಾಗಕ್ಕೆ ರೂ 16 ಕೋಟಿ ಸಾಲವನ್ನು ಜಪಾನ್ ಸರಕಾರ ಒದಗಿಸಿತ್ತು. ಎರಡು ತಿಂಗಳ ನಂತರ ರೇಲ್ವೆ ಬೋರ್ಡ್ ಅಂತರಾಷ್ಟ್ರೀಯ ಟೆಂಡರ್ ಕರೆಯಿತು. ಜಪಾನಿನ ಎರಡು ಕಂಪನಿಗಳು ಟೆಂಡರ್ ಹಾಕಿದ್ದವು. ರೇಲ್ವೆ ಟೆಂಡರ್ ಕಮಿಟಿ, ಆರ್ಥಿಕ ಕಮಿಟಿ, ರೇಲ್ವೆ ಮಂತ್ರಿಗಳೆಲ್ಲ ಅದನ್ನು ಪರಿಶೀಲಿಸಿವೆ. ಆದರೆ ಆರ್ಥಿಕ ಮಂತ್ರಿಯವರ ಮುಂದೆ ಬಂದಾಗ ಅದನ್ನು ನಿರಾಕರಿಸಲಾಯಿತು ಜಪಾನ್ ಸರಕಾರದ ಸಾಲದ ಒಪ್ಪಂದದ ಪ್ರಕಾರ ಜಪಾನಿನ ಕಂಟ್ರಾಕ್ಟ್ ಕಂಪನಿಗಳು ಸಾಲದ ಹಣವನ್ನು ಉಪಯೋಗಿಸ ಬಾರದೆಂದು ಆರ್ಥಿಕ ಮಂತ್ರಿಯವರ ವಾದ. ಜಪಾನಿನ ಕಂಪನಿಗಳು ಈ ವಾದವನ್ನು ಒಪ್ಪುತ್ತಿಲ್ಲ "ನನಗೂ ಆರ್ಥಿಕ ಮಂತ್ರಿಯವರಿಗೂ ಭಿನ್ನಾಭಿಪ್ರಾಯವಿದೆ" ಎಂದು ರೇಲ್ವೆ ಮಂತ್ರಿ ಚೌಧರಿ ಹೇಳುತ್ತಾರೆ.

ಇತ್ತೀಚೆಗೆ ಇವರಿಬ್ಬರೊಳಗಿನ ಭಿನ್ನಾಭಿಪ್ರಾಯ ತೀವ್ರಗೊಳ್ಳುತ್ತಿದೆ. ರೇಲ್ವೆ ಮಂತ್ರಿಯವರ ಪ್ರಭಾವ ಹೆಚ್ಚಾಗಿದ್ದು ಅದನ್ನು ಕುಂದಿಸಲು ಆರ್ಥಿಕ ಮಂತ್ರಿಯವರ ಗುಂಪು ಶತ ಪ್ರಯತ್ನ ನಡೆಸಿದೆ. ಈ ಯೋಜನೆಗೆ ರೇಲ್ವೆ ಮಂತ್ರಿಯವರು ರೂ 60 ಕೋಟಿ ಮೀಸಲಿಟ್ಟಿರುವುದರಿಂದ ಮುಖರ್ಜಿಯವರ ಗುಂಪಿನ ಕಣ್ಣು ಕೆಂಪಾಗಿದೆ.

ಇವರಿಬ್ಬರ ಒಳಜಗಳದಿಂದಾಗಿ ಕಲ್ಕತ್ತದ ಜನರಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ರೇಲ್ವೆ ಪೂರ್ಣಗೊಳ್ಳಲು ಕನಿಷ್ಠ 10 ವರ್ಷ ಬೇಕಾದೀತೆಂದು ಅಂದಾಜು ಮಾಡಲಾಗಿದೆ ಅಲ್ಲಿಯ ತನಕ ಕೆಲವು ಭಾಗಕ್ಕಷ್ಟೇ ರೇಲ್ವೆ ಸೌಲಭ್ಯ ಸಿಗಬಹುದು. ಅದಕ್ಕಾಗಿ ನಾಗರೀಕರು ಕೂಡ ಹೆಚ್ಚು ಹಣ ತೆರಬೇಕಾದೀತು.

ಚೌಧರಿ - ಮುಖರ್ಜಿಯವರ ಜಗಳದೊಡನೆ ಚೌಧರಿ ಜಾಫರ್ ಶರೀಫರ ಬೈದಾಟ — ಗುದ್ದಾಟಗಳು ಹೆಚ್ಚು ಬೆಳಕಿಗೆ ಬಂದಿವೆ. ಚೌಧರಿ—ಮುಖರ್ಜಿಯವರ ತಂಟೆ ಕಲ್ಕತ್ತಕ್ಕೆ ಸೀಮಿತವಾಗಿದ್ದರೆ, ಚೌಧರಿ—ಶರೀಫರ ಆರೋಪ ಕರ್ನಾಟಕಕ್ಕೆ ಸಂಬಂಧ ಪಟ್ಟಿದೆ. ಲೋಕಸಭೆ ಸ್ಥಾಪನೆಯಾದಂದಿನಿಂದ ಕರ್ನಾಟಕದವರೇ ರೇಲ್ವೆ ಮಂತ್ರಿಗಳಾಗಿದ್ದರೂ ಕೂಡ, ರೇಲ್ವೆ ಮಾರ್ಗ ನಿರ್ಮಾಣ, ಪರಿವರ್ತನೆಯ ಕುರಿತು ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಜಾಫರ್ ಶರೀಫರಿಂದಲೂ ಹೇಳಿಕೊಳ್ಳುವಂಥ ಸಾಧನೆ ಕಾಣಿಸುತ್ತಿಲ್ಲ. ಕೆಲವೇ ತಿಂಗಳಲ್ಲಿ ಮತ್ತೆ ತಾನು ಲೋಕಸಭೆ ಚುನಾವಣೆಯಲ್ಲಿ ಮತದಾರರನ್ನು ಎದುರಿಸ ಬೇಕಾಗಿ ಬಂದಿರುವುದರಿಂದ, ಮತ ಗಳಿಸಲು ತನ್ನ ಸಾಧನೆಗಳನ್ನು ಜನರ ಮುಂದೆ ಇಡಬೇಕಾಗಿರುವುದರಿಂದ ಕ್ಯಾಬಿನೇಟ್ ಮಂತ್ರಿಯಾದ ಘನಿಖಾನ್ ಚೌಧರಿಯವರು ತನ್ನ ರಾಜ್ಯದ ಕೆಲಸಗಳಿಗೆ ಅಡ್ಡಿಯನ್ನುಂಟು ಮಾಡುತ್ತಿದ್ದಾರೆಂಬ ಆರೋಪವನ್ನು ಜಾಫರ್ ಶರೀಫರು ಸಾರ್ವಜನಿಕವಾಗಿಯೇ ಪ್ರಕಟಿಸಿದ್ದಾರೆ. ಇಂದಿರಾ ಗಾಂಧಿಯವರಿಗೂ ಪತ್ರ ಮುಖೇನ ತಿಳಿಸಿದ್ದಾರೆ. ಕಾಂಗ್ರೆ ಗುಂಪುಗಾರಿಕೆ ದೇಶದ ಅಭಿವೃದ್ಧಿ ಕೆಲಸಗಳಿಗೆ ಯಾವ ರೀತಿ ಆತಂಕ ಒಡ್ಡುತ್ತಿದೆಂಬುದಕ್ಕೆ ಇದು ಸಾಕ್ಷಿ.

ಪಂಜಾಬ್ ಬಿಕ್ಕಟ್ಟಿನ ಏರಿಳಿವುಗಳು ಹಾಗೂ ತಿರುವುಗಳು

— ಹರ್‌ಕಿಷನ್ ಸಿಂಗ್ ಸುರಜಿತ್

ಅನು : ಅಶೋಕ ಶೆಟ್ಟರ್

(ಕಳೆದ ಸಂಚಿಕೆಯಿಂದ)

ಕಾಂಗ್ರೆಯ ಹಿತಗಳೇ ಪ್ರಾಧಾನ್ಯ

ಅಕಾಲಿಗಳು ಸರಕಾರವನ್ನು ಬೆಂಬಲಿಸಿ ಅಧಿಕಾರವನ್ನು ಹಂಚಿಕೊಳ್ಳಲು ತಯಾರಿದ್ದರೆ ಅವರ ಜೊತೆ ಒಪ್ಪಂದಕ್ಕೆ ಬರಲು ಸರಕಾರ ಸಿದ್ಧವಾಗಿತ್ತು. ಭಿಂದ್ರನ್‌ವಾಲೆ ಅಧಿಕಾರಾರೂಢ ಪಕ್ಷದ ಆಳ್ವಿಕೆಯು ಮುಂದುವರಿಕೆಗೆ ಸಹಾಯ ಮಾಡಲು ಸಿದ್ಧನಾಗಿದ್ದರೆ ಆತ ಮಾಡಿದ ಎಲ್ಲ ತಪ್ಪುಗಳನ್ನು ಮರೆತುಬಿಡಲು ಸರಕಾರ ಸಿದ್ಧವಿತ್ತು. ಬಿಕ್ಕಟ್ಟಿಗೆ ಪರಿಹಾರವೊಂದನ್ನು ಕಂಡು ಹಿಡಿಯುವ ನಿಟ್ಟಿನಲ್ಲಿ ಸರಕಾರ ವಿರೋಧಿ ಪಕ್ಷಗಳ ಸಹಾಯ ಯಾಚಿಸಲಿಲ್ಲ; ತಾನು ಅಕಾಲಿಗಳ ಜೊತೆ ನೇರವಾಗಿ ರಾಜಕೀಯ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗುವಂತೆ ಅಕಾಲಿಗಳ ಮೇಲೆ ಒತ್ತಡ ತರುವುದಕ್ಕೆ ಮಾತ್ರ ವಿರೋಧ ಪಕ್ಷಗಳನ್ನು ಸರಕಾರ ಉಪಯೋಗಿಸುತ್ತಿತ್ತು. ರಾಷ್ಟ್ರದ ಹಿತಕ್ಕಿಂತ ತನ್ನ ಕಾಂಗ್ರೆ ಪಕ್ಷದ ಸಂಕುಚಿತ ಹಿತವೇ ಯಾವಾಗಲೂ ಅದಕ್ಕೆ ಪ್ರಾಧಾನ್ಯವಾಗಿತ್ತು. ಕಳೆದ ಒಂದೂವರೆ ವರ್ಷದಿಂದ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶ್ವೇತ ಪತ್ರವೊಂದರ ಬೇಡಿಕೆಯನ್ನು ಸರಕಾರ ತಿರಸ್ಕರಿಸುತ್ತ ಬಂದಿರುವುದು ಏಕೆ ?

ನಮ್ಮ ಸಂವಿಧಾನದಲ್ಲಿ ಅಳವಡಿಸಲ್ಪಟ್ಟ ಜಾತ್ಯಾತೀತ ಗುರಿ ಸರಕಾರದ ಕೈಯ್ಯಲ್ಲಿ ಅತಿ ಹೀನ ಪರಿಸ್ಥಿತಿಗೆ ಗುರಿಯಾಗಿರುವುದು ಆಕಸ್ಮಿಕವೇನಲ್ಲ. ಶೈಕ್ಷಣಿಕ ಸಂಸ್ಥೆಗಳ ಮೂಲಕವಾಗಿಯಾಗಲೀ ಅಥವಾ ಇತರ ಪ್ರಸಾರಗಳಿಂದಾಗಲೀ ಜ್ಯಾತ್ಯಾತೀತ ರಾಷ್ಟ್ರದ ಕುರಿತು ಎಂದಿಗೂ ಪ್ರಸಾರ ಮಾಡಿಲ್ಲ. ಸರಕಾರಿ ವಕ್ತಾರರೇ ಜಾತ್ಯಾತೀತತೆಯ ಅರ್ಥವನ್ನು ಅಪಾರ್ಥ ಮಾಡುತ್ತಿದ್ದಾರೆ. ಅವರ ಪ್ರಕಾರ ಜ್ಯಾತ್ಯಾತೀತತೆ ಎಂದರೆ ಧರ್ಮವನ್ನು ರಾಜ್ಯದಿಂದ ಬೇರ್ಪಡಿಸುವುದಲ್ಲ; ಎಲ್ಲ ಧರ್ಮಗಳನ್ನೂ ಪ್ರಚಾರ ಮಾಡುವುದು ಎಂದರ್ಥ. ಆದ್ದರಿಂದಲೇ ಪ್ರಧಾನ ಮಂತ್ರಿಗಳನ್ನೊಳಗೊಂಡು ಎಲ್ಲ ಕೇಂದ್ರ ಮಂತ್ರಿಗಳೂ ಸಂಚಾರಕ್ಕೆ ಹೋದಾಗ ಧಾರ್ಮಿಕ ಸಂಸ್ಥೆಗಳಿಗೆ ಸಂದರ್ಶನ ನೀಡಲು ಮರೆಯುವುದಿಲ್ಲ.

ಈ ಕಾರಣದಿಂದಲೇ ಜಾತೀಯ ಪ್ರಚೋದನೆಗಳು ಉದ್ಭವಿಸಿದಾಗ, ಎಡ ಪಂಥೀಯವಲ್ಲದ ಪಕ್ಷಗಳಿಗೆ ಸೇರಿದ ಜನರಲ್ಲಿ ಜಾತೀಯ ಭಾವನೆಗೆ ಬಲಿಯಾಗುತ್ತಾರೆ. ಜಾತ್ಯಾತೀತತೆಯ ಧ್ವಜವನ್ನು ಎತ್ತಿ ಹಿಡಿಯುವ ಜವಾಬ್ದಾರಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಜನಾಂಗ ಅಳಿಯುತ್ತಿರುವುದರಿಂದ ಪರಿಸ್ಥಿತಿ ಗಂಭೀರವಾಗುತ್ತಿದೆ.

ಐಕ್ಯತೆ ಬಲಹೀನವಾಗುತ್ತಿದೆ.

ಛಿದ್ರಕಾರಿ ಶಕ್ತಿಗಳ ವಿರುದ್ಧವಾಗಿ ದೇಶದ ಐಕ್ಯತೆಗಾಗಿ ಭದ್ರವಾಗಿ ನಿಂತಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ವಿರುದ್ಧ ಹೋರಾಡಿ ಅವುಗಳನ್ನು ಬಲಹೀನಗೊಳಿಸುವ ಉದ್ದೇಶದಿಂದ ಸರಕಾರ ಹಾಗೂ ಆಳುವ ಪಕ್ಷ ಜಾತೀಯ ಮತ್ತು ಮತೀಯ ಭಾವನೆಗಳಿಗೆ ಒಳಗಾಗುತ್ತಿವೆ. ಮತ್ತು ಅಂಥ ಶಕ್ತಿಗಳೊಡನೆ ಸೇರಿ ಕೊಳ್ಳುತ್ತಿವೆ. ಕೇರಳದಲ್ಲಿ ಯಾವ ಆಧಾರದ ಮೇಲೆ ಅವರ ಒಕ್ಕೂಟ ನಿರ್ಮಾಣವಾಗಿದೆಂದು ಕಾಂಗ್ರೆಸ್ ಮುಖಂಡರು ವಿವರಿಸುವರೇ ?

ಪಂಜಾಬ್ ಬಿಕ್ಕಟ್ಟಿನ ಕುರಿತು ಸಿ.ಪಿ.ಐ. (ಎಂ) ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾ. ಹರ್‌ಕಿಶನ್ ಸಿಂಗ್ ಸುರ್ಜಿತ್ ಅವರು ಬರೆದ ಲೇಖನದ ಕನ್ನಡಾನುವಾದದ ಮೊದಲ ಕಂತನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಈ ಸಂಚಿಕೆಯಲ್ಲಿ ಅದನ್ನು ಮುಕ್ತಾಯಗೊಳಿಸುತ್ತಿದ್ದೇವೆ.

ಒಂದು ರಾಜ್ಯದ ಉಗ್ರಗಾಮಿಗಳು ಮತ್ತೊಂದು ಜಾತಿಯ ಜನರನ್ನು ಕೊಲ್ಲಲು ಪ್ರಾರಂಭಿಸಿದರೆ, ಬೇರೆ ರಾಜ್ಯಗಳಲ್ಲಿ ಆ ಜಾತಿಯ ಜನರ ಮೇಲೆ ಪರಿಣಾಮ ಬೀರುತ್ತದೆ. ಜ್ಯಾತ್ಯಾತೀತತೆಯ ಬುನಾದಿ ನಮ್ಮ ದೇಶದಲ್ಲಿ ಎಷ್ಟು ಬಲಹೀನವಾಗಿದೆಂಬುದನ್ನು ಇದು ತೋರಿಸಿಕೊಡುತ್ತದೆ. ಒಂದು ಪ್ರದೇಶದಲ್ಲಿ ಜಾತೀಯ ದಂಗೆ ಪ್ರಾರಂಭವಾದರೆ ಅದು ಜನರನ್ನು ಜಾತಿಯ ಆಧಾರದಲ್ಲಿ ವಿಂಗಡಿಸುತ್ತದೆ. ಅಂಥ ಪರಿಸ್ಥಿತಿಯಲ್ಲಿ ಜಾತೀಯ ಸೌಹಾರ್ದತೆಯ ಕರೆ ಬಹಳ ನಿಶ್ಯಕ್ತವಾಗುತ್ತದೆ.

ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯ ಮೇಲೆ ಏನು ಕೆಟ್ಟ ಪರಿಣಾಮವಾಗುತ್ತದೆಂಬುದನ್ನು ತಿಳಿದುಕೊಳ್ಳದೆ ಸ್ವಾರ್ಥವಾಗಿ ಸರಕಾರ ಅಂಥ ದಂಗೆಗಳನ್ನು ಪ್ರಜಾಪ್ರಭುತ್ವ ಚಳುವಳಿಯನ್ನು ನಿರ್ಬಲಗೊಳಿಸುವ ಸಲುವಾಗಿ ಉಪಯೋಗಿಸುತ್ತದೆ.

ದೇಶವನ್ನು ಅಭದ್ರಗೊಳಿಸುವಲ್ಲಿ ವಿದೇಶಿ ಕೈವಾಡವಿದೆಯೆಂದು ಸರಕಾರ ಹೇಳುತ್ತಿದೆ. ಆದರೆ ಸರಕಾರದ ನೀತಿಗಳೇ ಛಿದ್ರಕಾರಿ-ಪ್ರತ್ಯೇಕತವಾದಿ ಶಕ್ತಿಗಳ ಪೋಷಣೆಗೆ ನೆಲೆಗಳನ್ನೊದಗಿಸುತ್ತಿವೆ. ಸಾಮ್ರಾಜ್ಯಶಾಹಿಗಳಿಗೆ ಇದು ಅನುಕೂಲಕರವಾಗಿದೆ.

ವಿವಿಧ ಬೇಹುಗಾರಿಕೆ ದಳಗಳಿಗೆ ಸರಕಾರ ಹೇರಳವಾಗಿ ಹಣ ವ್ಯಯಿಸುತ್ತಿತ್ತು. ಆದರೆ ದರ್ಬಾರ್ ಸಾಹಿಬ್ ಸಮುಚ್ಚಯದಲ್ಲಿ ಸಂಗ್ರಹಿತವಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಕುರಿತು ಯಾವುದೇ ಸೂಚನೆ ಸರಕಾರಕ್ಕೆ ಸಿಕ್ಕಿರಲಿಲ್ಲವೆಂಬುದು ನಮಗೀಗ ತಿಳಿದಿದೆ. ಈ ಅಸ್ತ್ರಗಳು ಎಲ್ಲಿಂದ ಮತ್ತು ಹೇಗೆ ಬಂದವು ? ಇದು ಸಂಪೂರ್ಣ ಅನರ್ಹತೆಯನ್ನು ತೋರಿಸುವುದಿಲ್ಲವೇ ?

ಪಕ್ಷಗಳು ಬರಬಹುದು ಮತ್ತು ಹೋಗಬಹುದು, ಆದರೆ ದೇಶದ ಐಕ್ಯತೆ ಛಿದ್ರಗೊಂಡರೆ, ಅದು ನಮ್ಮ ದೇಶಕ್ಕಷ್ಟೇ ಅಲ್ಲ, ಇಡೀ ಜಗತ್ತಿಗೆ ಹಾನಿಕಾರಕವೆಂಬುದನ್ನು ಆಳುವ ಪಕ್ಷ ತಿಳಿದು ಕೊಳ್ಳುವುದಗತ್ಯ. ಸದ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರೋತ್ಸಾಹದಿಂದ ಪ್ರತ್ಯೇಕತಾವಾದಿಗಳೂ, ವಿಛಿದ್ರಕಾರಿ ಶಕ್ತಿ, ಫಂಡಮೆಂಟಲಿಸ್ಟರೆಲ್ಲ ಬಹಳ ಚುರುಕಾಗಿದ್ದು ದೇಶದ ಐಕ್ಯತೆಗೆ ಧಕ್ಕೆಯನ್ನುಂಟು ಮಾಡಲು ಬೇಕಾದ್ದನ್ನು ಮಾಡಲಿಕ್ಕೆ ಸಿದ್ಧವಾಗಿವೆ. ಈ ಅಪಾಯದ ಕುರಿತು ಎಲ್ಲಾ ದೇಶ ಪ್ರೇಮಿಗಳಲ್ಲಿ ತಿಳುವಳಿಕೆಯನ್ನುಂಟು ಮಾಡುವುದು ಅತ್ಯಗತ್ಯ. ಇಂಥ ಪರಿಸ್ಥಿತಿಯನ್ನು ತಮ್ಮ ಸಂಕುಚಿತ ರಾಜಕೀಯಕ್ಕಾಗಿ ಉಪಯೋಗ ಮಾಡುವುದೆಂದರೆ ಬೆಂಕಿಯೊಡನೆ ಆಟವಾಡಿದಂತೆಯೇ ಸರಿ.

ಪಂಜಾಬ್, ಜಮ್ಮು - ಕಾಶ್ಮೀರ ಅಸ್ಸಾಂ ಮತ್ತು ಈಶಾನ್ಯ ಭಾಗದ ರಾಜ್ಯಗಳಲ್ಲಿಯ ಪರಿಸ್ಥಿತಿಯನ್ನು ಯಾವ ರೀತಿ ಬಗೆಹರಿಸುತ್ತಿದ್ದೇವೆ ಎಂಬುದರ ಕುರಿತು ಈಗಲಾದರೂ ಆಳುವ ಪಕ್ಷ ಮತ್ತು ಅದರ ಸರಕಾರ ಸರಿಯಾದ ಪಾಠ ಕಲಿತುಕೊಳ್ಳುವುದಗತ್ಯ. ಅವರು ತೀವ್ರವಾದಿಗಳನ್ನು ಹೊಡೆದು ಹಾಕಿದ್ದೇವೆಂಬ ಸಮಾಧಾನದಿಂದಿರಬಾರದು. ಪಂಜಾಬಿನಲ್ಲಿಯ ಪರಿಸ್ಥಿತಿಯನ್ನು ಎದುರಿಸಿದ ರೀತಿಯಿಂದಾಗಿ ತೀವ್ರವಾದಿಗಳ ಸೈದ್ಧಾಂತಿಕ ನೆಲೆ ವಿಸ್ತರಿಸಿದೆ. ಆದ್ದರಿಂದ ಯಾವದೇ ಸ್ವಸಂತುಷ್ಟಿಗೆ ಅವಕಾಶವಿಲ್ಲ.

ಅಕಾಲಿ ಪಕ್ಷದ ಪಾತ್ರ

ಸಾಮಾನ್ಯ ಜನರನ್ನು ಕೊಲೆಗೈಯುವ, ದರೋಡೆ ಮಾಡುವ, ಲೂಟಿಗೈಯುವ ಭಯೋತ್ಪಾದಕರ ಚಟುವಟಿಕೆಗಳಿಂದ ಅಕಾಲಿ ಪಕ್ಷವು ಪ್ರಚಲಿತ ಆಂದೋಲನದುದ್ದಕ್ಕೂ ತನ್ನನ್ನೇ ತಾನು ಪ್ರತ್ಯೇಕಿಸಿಕೊಂಡಿತ್ತು. ಆದರೆ ಉಗ್ರವಾದಿಗಳ ಈ ಎಲ್ಲ ಚಟುವಟಿಕೆಗಳು ಸ್ವರ್ಣಮಂದಿರದ ಆವರಣದಿಂದ ನಡೆಯುತ್ತಿದ್ದ ವಿಷಯ ಅದಕ್ಕೆ ಗೊತ್ತಿತ್ತು. ಉಗ್ರವಾದಿಗಳು ಸ್ವರ್ಣ ಮಂದಿರದ ಆವರಣದಲ್ಲೇ ಪತ್ರಿಕಾ ಗೋಷ್ಠಿಗಳನ್ನೇರ್ಪಡಿಸುತ್ತಿದ್ದರು. ಜನರ ಮನಸಿನಲ್ಲಿ ಸೇಡಿನ ವಿಷಬೀಜಗಳನ್ನು ಬಿತ್ತಲು ಗುರುದ್ವಾರಗಳ ವೇದಿಕೆಗಳನ್ನು ಬಳಸಿಕೊಳ್ಳುತ್ತಿದ್ದರು. ಧಾರ್ಮಿಕ ಸ್ಥಳಗಳ ಇಂಥ ಪ್ರಯೋಜಕತೆಯನ್ನು ಬಹಿರಂಗವಾಗೇ ಪ್ರತಿಪಾದಿಸುತ್ತಿದ್ದರು. ಖಲಿಸ್ತಾನದ ಸಂವಿಧಾನವನ್ನು ಘೋಷಿಸಿ ಅದರ ಧ್ವಜವನ್ನೂ ಏರಿಸಿದರು. ಈ ಎಲ್ಲ ರಾಷ್ಟ್ರ-ವಿರೋಧಿ ಚಟುವಟಿಕೆಗಳು ಗುರುದ್ವಾರಗಳ ಪಾವಿತ್ರ್ಯವನ್ನು ಸಂಪೂರ್ಣ ಕಡೆಗಣಿಸಲ್ಪಟ್ಟೇ ನಡೆದವು.

ಈಗಿನಂತೆ ಗುರುದ್ವಾರಗಳನ್ನು ಶಸ್ತ್ರಾಸ್ತ್ರ ಸಂಗ್ರಹಾಲಯವಾಗಿ ಪರಿವರ್ತಿಸಿದ ಉದಾಹರಣೆ 1921 ರಿಂದಲೂ ಗುರುದ್ವಾರ ವ್ಯವಸ್ಥಾಪನೆಯ ಇತಿಹಾಸದಲ್ಲೇ ಇಲ್ಲ. ಗುರುದ್ವಾರಗಳಲ್ಲಿ ಆಶ್ರಯ ಪಡೆದು ಅವುಗಳನ್ನು ಎಲ್ಲ ಬಗೆಯ ಶಸ್ತ್ರಾಸ್ತ್ರ ಪೇರಿಕೆಯ ಆಗರವಾಗಿ ಮಾಡಿದ ಉಗ್ರವಾದಿಗಳನ್ನು ಪ್ರತಿಬಂಧಿಸುವುದು ಗುರುದ್ವಾರಗಳಲ್ಲಿ ಪೋಲಿಸ್ ಪ್ರವೇಶಕ್ಕೆ ಆಕ್ಷೇಪಿಸುತ್ತಿದ್ದ ಅಕಾಲಿಗಳ ಕರ್ತವ್ಯವಾಗಿರಲಿಲ್ಲವೇನು ?

ಇದೆಲ್ಲವನ್ನು ಏಕೆ ಕಡೆಗಣಿಸಲಾಯಿತು ? ಸ್ವರ್ಣಮಂದಿರದಲ್ಲಿ ಮೆಷಿನ್‌ಗನ್‌ಗಳ ಸ್ಥಾಪನೆಗೆ ಅವಕಾಶವಿತ್ತವರಾರು ? ತನ್ನ ಹೋರಾಟ ಶಾಂತವಾಗಿತ್ತೆಂದು ಅಕಾಲಿ ಧುರೀಣತ್ವ ಹೇಳುತ್ತದೆ. ಆದರೆ ಗುರುದ್ವಾರಗಳ ಆವರಣದಿಂದಲೇ ನಡೆಯುತ್ತಿದ್ದ, ಹಿಂಸೆಯನ್ನಾಧರಿಸಿದ ಜನ-ವಿರೋಧಿ ಪ್ರತಿ ಹೋರಾಟವನ್ನು ಅಕಾಲಿ ಧುರೀಣತ್ವ ಖಂಡಿಸಿಲ್ಲವೇಕೆ ? ವಾಸ್ತವವಾಗಿ ಅಪರಾಧ ಎಸಗುವಾಗಲೇ ಸಿಕ್ಕಿಹಾಕಿಕೊಂಡ ಉಗ್ರವಾದಿಗಳನ್ನೂ ಮುಗ್ಧರು ಎಂದು ಹೇಳಿ ಅಕಾಲಿ ಧುರೀಣತ್ವ ರಕ್ಷಿಸಿತು. ಸ್ವರ್ಣ ಮಂದಿರ ಹಾಗೂ ಗುರುದ್ವಾರಗಳಲ್ಲಿ ಭಯೋತ್ಪಾದಕರು ಆಶ್ರಯ ಪಡೆದು ಶಸ್ತ್ರಾಸ್ತ್ರಗಳನ್ನು ಶೇಖರಿಸುತ್ತಿದ್ದುದನ್ನು ಅಕಾಲಿಗಳು ಅಲ್ಲಗಳೆದರು.

(6ನೇ ಪುಟ ನೋಡಿ)

ಒಂದು ಪೋಲಿಷ್ ಕವನ

ಅಪ್ಪುಗೆ

ಬದುಕ ಬಯಸಿದಾಗಲೆಲ್ಲಾ
ಹಪ್ಪೋದ್ಗಾರ ಮಾಡುತ್ತೇನೆ —

ಬದುಕು ಹೊರಟು ನಿಂತಾಗಲೆಲ್ಲ
ಅದಕ್ಕೆ ಅತುಕೊಂಡು
ಹೋಗಬೇಡ ಎನ್ನುತ್ತೇನೆ

ಅಗಲುವ ಪ್ರಿಯತಮನೇನೋ ಎಂಬಂತೆ
ಅದರ ಬೆಚ್ಚಗಿನ ಅಂಗೈಯನ್ನು ಹಿಡಿದು
ತುಟಿಗಳನ್ನು ಕಿವಿಯ ಬಳಿ ಇಟ್ಟು
ಉಸುರುತ್ತೇನೆ,
'ಬದುಕು' —

ಬದುಕಿನ ಕೊರಳಿಗೆ ಜೋತು ಬಿದ್ದು
ಕೂಗುತ್ತೇನೆ :

"ನೀನು ಹೊರಟೆ ಎಂದರೆ
ನಾನು ಖಂಡಿತ ಸಾಯುವೆ !"

ಮೂಲ— ಪಾಲಿನಾ ಪೊಸ್‌ವಿಯಟೋವ್‌ಸ್ಕಾ

ಅನು : ತೇಜಸ್ವಿನೀ ನಿರಂಜನ

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು	5

ವಿಮೋಚನಾ ಹೋರಾಟಗಳು, ಫ್ಯಾಸಿಸಂ ಮತ್ತು ಕಾಂಗ್ರೆಸ್ಸಿನ ತಪ್ಪುಗ್ರಹಿಕೆ

(ಎರಡನೆಯ ಭಾಗದ ಕೊನೆಯ ಕಂತು)

— ಕಾ|| ಎಂ. ಬಸವಪುನ್ನಯ್ಯ

(ಕಳೆದ ಸಂಚಿಕೆಯಿಂದ)

ಭಿನ್ನ ಅಳತೆಗೋಲು ಏಕೆ ?

ಈ ರೀತಿ ಗಾಂಧಿಯವರು ಬ್ರಿಟಿಶ್ ಸರಕಾರಕ್ಕೆ ಸೆಪ್ಟಂಬರ್ 1939 ರಿಂದ ಆಗಸ್ಟ್ 1942 ರ ವರೆಗೆ ಬರೆದ ಇಂತಹ ಪತ್ರಗಳ ಪೂರಾ ಒಂದು ಸಂಪುಟವೇ ಇದೆ ಮಾತ್ರವಲ್ಲ, ಈ ಪತ್ರ ವ್ಯವಹಾರ 1942 ರಿಂದ 1944 ರ ವರೆಗೆ ಆಗಾ ಖಾನ್ ಅರಮನೆಯ ಬಂಧನದಲ್ಲೂ ಮುಂದುವರಿಯಿತು. 1943 ರ ಮೇ 27 ರಂದು ಗಾಂಧಿ ರಿಚರ್ಡ್ ಮ್ಯಾಕ್ಸ್‌ವೆಲ್‌ಗೆ ಬರೆದ ಮಾತುಗಳಿವು— "ಆ ಸಾಮೂಹಿಕ ಆಂದೋಲನ, ಅದನ್ನು ಅನುಮೋದಿಸಿದ ನಿರ್ಣಯವೇ ವಿಸ್ತಾರವಾಗಿ ಹೇಳುವಂತೆ, ಅನುಮೋದಿಸಲ್ಪಟ್ಟದ್ದು ಮಿತ್ರದೇಶಗಳ ಧ್ಯೇಯ ಸಾಧನೆಯ ಪರವಾಗಿ, ಜತೆಗೆ ರಷ್ಯಾ ಮತ್ತು ಚೀಣಾದ ಧ್ಯೇಯ ಸಾಧನೆಯಾಗಿ ಕೂಡಾ ಒಂದು ಅಖಿಲ-ಭಾರತ ಪ್ರಯತ್ನಕ್ಕೆ ಒತ್ತಾಸೆ ನೀಡುವುದಕ್ಕಾಗಿಯೇ. ಈ ಧ್ಯೇಯ ಸಾಧನೆಗೆ ಕಳೆದ ಆಗಸ್ಟ್‌ನಲ್ಲಿ ದೊಡ್ಡ ಅಪಾಯವಿತ್ತು. ನನ್ನ ಅಭಿಪ್ರಾಯದಲ್ಲಿ, ಈಗಲೂ ಈ ಅಪಾಯದಿಂದ ಅವರು ಮುಕ್ತರಾಗಿಲ್ಲ." ಮಿತ್ರ ಪಕ್ಷಗಳ ಧ್ಯೇಯೋದ್ದೇಶಕ್ಕೆ ತಟ್ಟಿದ್ದ ಅಪಾಯದ ಪ್ರಶ್ನೆಯ ಬಗ್ಗೆ ಇಷ್ಟೊಂದು ಆತಂಕಪಡಿದ್ದರೆ, "ಮಿತ್ರ ದೇಶಗಳ ಧ್ಯೇಯ ಸಾಧನೆಯ ಪರವಾಗಿ ಒಂದು ಅಖಿಲ ಭಾರತ ಪ್ರಯತ್ನಕ್ಕೆ ಒತ್ತಾಸೆ ನೀಡುವುದಕ್ಕಾಗಿ" ಆಗಸ್ಟ್ 1942 ರ ಸಂಪೂರ್ಣ ಚಳುವಳಿಗೆ ಅನುಮೋದನೆ ನೀಡಿದ್ದರೆ ಯುದ್ಧ ಪ್ರಯತ್ನಗಳನ್ನು ಮತ್ತು ಉತ್ಪಾದನೆಯನ್ನು ಅಸ್ತವ್ಯಸ್ತಗೊಳಿಸುವುದಕ್ಕೆ ಕಮ್ಯೂನಿಸ್ಟರ ನೀತಿಬದ್ಧ ವಿರೋಧವನ್ನೇಕೆ ಭಾರತೀಯ ಸ್ವಾತಂತ್ರ್ಯ ಆಂದೋಲನಕ್ಕೆ ಬಗೆದ ವಿಶ್ವಾಸಘಾತ ಎಂದು ದೊಡ್ಡದಾಗಿ ದೂಷಿಸಬೇಕು ? ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ವಿರುದ್ಧ ವಿದೇಶೀ ಸಾಮ್ರಾಜ್ಯಶಾಹಿಗಳೊಂದಿಗೆ ಕೈ ಮಿಲಾಯಿಸಿದ್ದು ಎಂದು ಅದನ್ನು ಅರ್ಥೈಸಲು ಹೇಗೆ ಸಾಧ್ಯ ?

"ಅವರು ಕಾರ್ಯಾಚರಣೆಯಿಂದ ದೂರವಿದ್ದರು ಮಾತ್ರವಲ್ಲ, ಕಾಂಗ್ರೆಸ್ ಉದ್ದೇಶಪೂರ್ವಕವಾಗಿಯೇ ಬ್ರಿಟಿಶ್ ಯುದ್ಧ ಪ್ರಯತ್ನಗಳಿಗೆ ಜನ, ಧನಗಳಿಂದ ನೆರವು ನೀಡುವುದು ತಪ್ಪು, ಮಾಡಬೇಕಾದ ಒಂದೇ ಯೋಗ್ಯ ಪ್ರಯತ್ನವೆಂದರೆ ಎಲ್ಲಾ ಯುದ್ಧಗಳನ್ನು ಅಹಿಂಸೆಯಿಂದ ಪ್ರತಿರೋಧಿಸುವುದು ಎಂಬ ಸೂತ್ರವನ್ನು ಸಾರಿತ್ತು." ಎಂದು ಲಾರ್ಡ್ ಸ್ಯಾಮುವೆಲ್ ಅಪಾದನೆ ಹೊರಿಸಿದ್ದರು. 1943 ರ ಮೇ 15 ರಂದು ಈ ಆಪಾದನೆಗೆ ನೀಡಿದ ಆವೇಶಪೂರ್ಣ ಉತ್ತರದಲ್ಲಿ ಮಹಾತ್ಮಾ ಗಾಂಧಿ "ಬ್ರಿಟಿಶ್ ಸಾರ್ವಜನಿಕರನ್ನು ಯಾವ ರೀತಿ ಕಾಲ್ಪನಿಕ ಕಥೆಗಳ ಮೂಲಕ ತಪ್ಪು ದಾರಿಗೆಳೆಯಲಾಗಿದೆ ಎಂಬುದನ್ನು ಇದು ತೋರಿಸಿಕೊಡುತ್ತದೆ. ಯಾಕೆಂದರೆ ಭಾರತ ಸರಕಾರದ ಪ್ರಕಟಣೆಗಳಲ್ಲಿ ಮಾಡುವಂತೆ ಹೇಳಿಕೆಗಳನ್ನು ಅವನ್ನಿತ್ತ ಸಂದರ್ಭದಿಂದ ಕಿತ್ತು ತೆರೆದು ಅದೇ ಸಂದರ್ಭದಲ್ಲಿ ಒಂದಿಲ್ಲೊಮ್ಮೆ ಹೇಳಬಹುದೇನೋ ಎನ್ನುವಂತೆ ಮಾಡಲಾಗಿದೆ." ರಾಷ್ಟ್ರೀಯ ವಿಮೋಚನೆಯ ಹೋರಾಟದಲ್ಲಿ ಕಾಂಗ್ರೆಸ್ ಅಹಿಂಸಾತ್ಮಕ ಪ್ರತಿರೋಧದ ತತ್ವವನ್ನು "ಎಷ್ಟೇ ಅಸಮರ್ಪಕವಾಗಿಯಾದರೂ" ಪರಿಪಾಲಿಸಿತ್ತು ಎಂದು ಹೇಳುತ್ತಾ "ಆದರೆ ಅದು ಎಂದೂ ಅಹಿಂಸೆಯ ಮೂಲಕ ಯುದ್ಧ ವಿರೋಧದ ಸೋಗು ಹಾಕಲಿಲ್ಲ. ಆಗಸ್ಟ್ 8 ರ ನಂತರ ನಡೆದ ಗಲಭೆಗಳು ನಡೆದದ್ದು ಕಾಂಗ್ರೆಸ್‌ನ ಯಾವುದೇ ಕಾರ್ಯಾಚರಣೆಯಿಂದಾಗಿ ಅಲ್ಲ. ಮಾನಸಿಕವಾಗಿ ಪೂರ್ತಿಯಾಗಿ ತಪ್ಪಾದ ಸಮಯದಲ್ಲಿ ಭಾರತದಾದ್ಯಂತ ಕಾಂಗ್ರೆಸ್ ನಾಯಕರನ್ನು ಬಂಧಿಸುವ ಸರಕಾರದ ಉದ್ರೇಕಕಾರಿ ಕ್ರಮವೇ ಪೂರ್ಣವಾಗಿ ಇದಕ್ಕೆ ಕಾರಣ" ಎಂದು ಅವರು ಒತ್ತಿ ಹೇಳಿದ್ದಾರೆ.

ಪೂರ್ವಾಪರವಿಲ್ಲದ ನುಡಿಗಳು

ಇದನ್ನೇ ಸಾಮಾನ್ಯ ಬಳಕೆಯ ಮಾತಲ್ಲಿ ಪೂರ್ವಾಪರವಿಲ್ಲದೆ ಮಾತಾಡುವುದು ಎನ್ನುವುದು. ಒಂದೆಡೆ ಫ್ಯಾಸಿಸ್ಟ್ ಅಪಾಯ ಹೆಚ್ಚುತ್ತಲಿತ್ತು, ಇನ್ನೊಂದೆಡೆ ಫ್ಯಾಸಿಸ್ಟ್ ಪೀಡೆಯ ವಿರುದ್ಧ ಯುದ್ಧ ಪ್ರಯತ್ನಗಳನ್ನು ಗಂಭೀರ ರೀತಿಯಲ್ಲಿ ಅಸ್ತವ್ಯಸ್ತಗೊಳಿಸಲಾಗಿತ್ತು ಎಂದು ಒಪ್ಪಿಕೊಳ್ಳುತ್ತಾರೆ, ಈ ಅಸ್ತವ್ಯಸ್ತ ಗೊಳಿಸುವ, ಸಂಘಟನೆ ಕೆಡಿಸುವ ಕೆಲಸ ಏಕೆ ನಡೆಯಿತು ? ಯಾಕೆಂದರೆ ಬ್ರಿಟಿಶ್ ಚಿತಾವಣೆಯಿಂದಾಗಿ; ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಆಗಸ್ಟ್ ನಿರ್ಣಯದಿಂದಾಗಿ ಅಥವಾ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಭಾರತದ ಸಾಮಾನ್ಯ ಸ್ತ್ರೀ ಪುರುಷರು ಅದನ್ನು ಅರ್ಥ ಮಾಡಿಕೊಂಡ ರೀತಿಯಿಂದಾಗಿ ಅಲ್ಲ.

ಯುದ್ಧವನ್ನು ಅದರ ಎರಡನೇ ಘಟ್ಟದಲ್ಲಿ ಗಾಂಧೀಜಿ ಅರ್ಥ ಮಾಡಿಕೊಂಡ ಬಗೆಯನ್ನು ತಿಳಿಸುವ ಒಂದು ಪರಿಚ್ಛೇದವನ್ನು ಅವರು ಪಿ. ಸಿ. ಜೋಶಿಗೆ ಬರೆದ ಪತ್ರದಿಂದ ಉದಾಹರಿಸೋಣ.

"ನನ್ನ ಮೊದಲ ಪ್ರಶ್ನೆಗೆ ನಿಮ್ಮ ಉತ್ತರ ನಿಮಗೆ ಇನ್ನೊಂದು ಪ್ರಶ್ನೆ ಹಾಕುವಂತೆ ಪ್ರೇರೇಪಿಸುತ್ತದೆ. ಅದಕ್ಕೆ ನಿಮ್ಮ ಉತ್ತರ ಬೇಕು. ಮಿತ್ರ ಶಕ್ತಿ ಪಕ್ಷದ ಪ್ರಮುಖ ನಟರು ಯಾವುದೇ ರೀತಿಯಲ್ಲಿ ನಿಜವಾದ ಪ್ರಜಾಪ್ರಭುತ್ವದ ಒಲವು ಹೊಂದಿದವರಲ್ಲವಾದರೂ, ಯುದ್ಧ ಮುಗಿಯುವ ಹೊತ್ತಿಗೆ ಅವರ ಕುತಂತ್ರಗಳು ತಲೆಕೆಳಗಾಗುತ್ತವೆ ಮತ್ತು ಜಗತ್ತಿನಾದ್ಯಂತ ಜನತೆ ಒಮ್ಮೆಲೇ ಅರ್ಥಾಭಿವ್ಯಕ್ತಿ ಪಡೆದು ಈಗಿನ ನಾಯಕರುಗಳನ್ನೆಲ್ಲಾ ಕಿತ್ತೊಗೆಯುತ್ತಾರೆ ಎಂದು ನೀವು ಯೋಚಿಸುವುದಾಗಿ ನಾನು ತಿಳಿಯುತ್ತೇನೆ.

> ಎರಡು ವರ್ಗಗಳು, ಎರಡು ಅಳತೆ ಗೋಲುಗಳು, ಎರಡು ಪರಸ್ಪರ ಬೇರೆಯಾದ ಅರ್ಥವಿವರಣೆಗಳು ಮತ್ತು ಎರಡು ಪರಸ್ಪರ ಭಿನ್ನವಾದ ಪ್ರೇರಕಾಂಶಗಳು! ಬೇರೆಲ್ಲಾ ಪ್ರಶ್ನೆಗಳಂತೆ ಎರಡನೇ ಜಾಗತಿಕ ಯುದ್ಧದ ಗುಣವಿವರಣೆಯಲ್ಲೂ ಎರಡು ಪರಸ್ಪರ ಬೇರೆಯಾದ ದೃಷ್ಟಿಕೋನಗಳು— ಕಮ್ಯುನಿಸ್ಟರದ್ದು ಮತ್ತು ಕಾಂಗ್ರೆಸಿಗರದ್ದು — ಪರಸ್ಪರ ವಿರುದ್ಧವಾಗಿದ್ದವು. ಒಂದು ಕಾರ್ಮಿಕ ವರ್ಗದ ದೃಷ್ಟಿಕೋನ— ಕಾರ್ಮಿಕರು ಮತ್ತು ಜನತೆಗಳ ನಡುವೆ ಅಂತರ್ರಾಷ್ಟ್ರೀಯ ಸೌಹಾರ್ದತೆ ಉಂಟುಮಾಡುವ ದೃಷ್ಟಿಕೋನ, ಇನ್ನೊಂದು ಸಂಕುಚಿತವಾದವನ್ನು ಪೋಷಿಸುವ ಬೂರ್ಜ್ವಾ ದೃಷ್ಟಿಕೋನ.

ನಿಮ್ಮ ಉತ್ತರದ ಪ್ರಕಾರ ಆ ಜನತೆಯಲ್ಲಿ ನಾನು ನಮ್ಮನ್ನು, ಇತರ ಏಷ್ಯಾಟಿಕ್ ಜನತೆಯನ್ನು ನೀಗ್ರೋಗಳನ್ನು, ಅಷ್ಟೇ ಏಕೆ, ಜಪಾನ್ ಮತ್ತು ಜರ್ಮನಿಯ ಕಾರ್ಮಿಕ ವರ್ಗವನ್ನು ಕೂಡಾ ಸೇರಿಸಿಕೊಳ್ಳಬಹುದು. ಇದೇ ನಿಮ್ಮ ನಂಬಿಕೆಯಾದರೆ ನಾನು ಅದನ್ನು ಒಪ್ಪುವುದಿಲ್ಲ ಎಂದು ಹೇಳಬೇಕಾಗುತ್ತದೆ. ಆದರೆ ಈ ಬಗ್ಗೆ ಇನ್ನಷ್ಟು ನೀವು ಮನಗಾಣಿಸುವುದಾದರೆ ಅದಕ್ಕೆ ನಾನು ಸಿದ್ಧನಿದ್ದೇನೆ. ಈ ಮಧ್ಯೆ, "ಜನತಾ ಯುದ್ಧ" ಎಂಬ ಶಿರೋನಾಮೆ ತಪ್ಪು ಅಭಿಪ್ರಾಯ ಕೊಡುವಂತಹದು ಎಂದು ಸೂಚಿಸುತ್ತೇನೆ. ಕನಿಷ್ಠ ಒಂದು ಜನಪ್ರಿಯ ಪಕ್ಷವಾದರೂ ಇದನ್ನು ಜನತಾಯುದ್ಧವಾಗಿ ಪರಿಗಣಿಸುತ್ತದೆ ಎಂದು ಹೇಳಿಕೊಳ್ಳಲು ಭಾರತ ಸರಕಾರಕ್ಕೆ ಅದು ಅವಕಾಶ ಒದಗಿಸುತ್ತದೆ. ಮಿತ್ರ ಶಕ್ತಿಗಳೊಂದಿಗೆ ರಷ್ಯಾದ ಜೀವಿತ ಮಿತ್ರತ್ವದಿಂದಾಗಿ ಕೂಡಾ ಈ ಹಿಂದೆ ನಾಝಿಗಳ ಕೂಟಕ್ಕೆ ವಿರುದ್ಧವಾದ ಸಾಮ್ರಾಜ್ಯಶಾಹೀ ಯುದ್ಧ ಜನತಾಯುದ್ಧವಾಗಿ ಪರಿವರ್ತಿತಗೊಳ್ಳುತ್ತದೆ ಎಂದು ಯಾವ ರೀತಿಯಿಂದಲೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಕೂಡಾ ಸೂಚಿಸುತ್ತೇನೆ.

"ನನ್ನ ಈ ದೃಷ್ಟಿಕೋನದಿಂದಾಗಿ, ಈ ಯುದ್ಧ ಜಗತ್ತನ್ನು ಎರಡು ಶಿಬಿರಗಳಾಗಿ ಒಡೆದಿದೆ ಎಂಬ ವಾದವನ್ನು ಈಗ ಉತ್ತರಿಸುವುದು ಅನಗತ್ಯ. ಈ ಎರಡರ ನಡುವೆ ಯಾವ ದಿಕ್ಕಿನಲ್ಲಿ ಜಲಯಾನ ಮಾಡಿದರೂ ನನ್ನ ಹಡಗು ಮುಳುಗುತ್ತದೆ. ಆದ್ದರಿಂದ ನಾನು ಬಿರುಗಾಳಿಯ ಮಧ್ಯೇನೇ ಇರಬೇಕು. ನಾನೊಂದು ಪರಿಹಾರ ಸೂಚಿಸಿದೆ. ಸ್ವಾಭಾವಿಕವಾಗಿಯೇ ಅದು ನಿರಾಕರಿಸಲ್ಪಟ್ಟಿತ್ತು. ಏಕೆಂದರೆ ಅಧಿಕಾರದಲ್ಲಿರುವವರಿಗೆ ಭಾರತದ ಮೇಲೆ ಬಿಗಿಹಿಡಿತವನ್ನು ಸಡಿಲಿಸುವುದು ಇಷ್ಟವಿಲ್ಲ. ನಿಮಗೆ ಈ ಪತ್ರವನ್ನು ರೂಪಿಸುತ್ತಿರುವಂತೆ ನಾನು ನಿಮ್ಮ ವಾದವನ್ನು ಮತ್ತೆ ಮತ್ತೆ ಓದಿದೆ. ಪ್ರತಿಯೊಂದು ಪರಿಚ್ಛೇದವೂ ರೇಗಿಸುವಂತಹದು. ಯಾಕೆಂದರೆ ನನ್ನ ಪ್ರಕಾರ ಅದರಲ್ಲಿ ವಾಸ್ತವತೆಯ ಅಭಾವವಿದೆ. ದಯವಿಟ್ಟು ನನ್ನನ್ನು ನಂಬಿ, ನಿಮ್ಮ ಪಕ್ಷದ ವಿರುದ್ಧ ನನ್ನ ಪೂರ್ವಾಗ್ರಹಕ್ಕೂ ಮೊದಲ ಪ್ರಶ್ನೆಗೆ ನಿಮ್ಮ ಉತ್ತರವನ್ನು ನಾನು ಪರೀಕ್ಷಿಸಿರುವ ರೀತಿಗೂ ಏನೂ ಸಂಬಂಧವಿಲ್ಲ."

[1944 ರ ಜುಲೈ 30 ರಂದು ಪಿ.ಸಿ. ಜೋಶಿಗೆ ಮಹಾತ್ಮಾಗಾಂಧಿ ಬರೆದ ಪತ್ರದಿಂದ]

ಗಾಂಧಿ 1939 ರಲ್ಲಿ ಯುದ್ಧದ ಮೊದಲ ಘಟ್ಟದ ಅವಧಿಯಲ್ಲಿ "ಸರಿಯೋ, ತಪ್ಪೋ, ಇಂತಹ ಸಂದರ್ಭಗಳಲ್ಲಿ ಬೇರೆ ಶಕ್ತಿಗಳು ಈ ಹಿಂದೆ ಏನೇ ಮಾಡಿದ್ದರೂ ಕೂಡಾ, ಹೆರ್ ಹಿಟ್ಲರ್ ಯುದ್ಧಕ್ಕೆ ಹೊಣೆ ಎಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ" ಎಂದು ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳೋಣ.

ಅಷ್ಟೇ ಅಲ್ಲ, 1939 ರ ಸಪ್ಟೆಂಬರ್ 30 ರ "ಹರಿಜನ್"ನಲ್ಲಿ ಗಾಂಧಿ ತನ್ನ ಸಹಾನುಭೂತಿ ಸಂಪೂರ್ಣವಾಗಿ ಮಿತ್ರದೇಶಗಳೊಂದಿಗೆ, "ಬೇಕೋ-ಬೇಡವೋ, ಈ ಯುದ್ಧವಂತೂ ಪಾಶ್ಚಿಮಾತ್ಯರು ವಿಕಸನಗೊಳಿಸಿದ ರೀತಿಯ ಪ್ರಜಾಪ್ರಭುತ್ವ ಮತ್ತು ಹೆರ್ ಹಿಟ್ಲರ್‌ನ ಮಾದರಿಯ ಅಧಿನಾಯಕವಾದದ ನಡುವಣ ಯುದ್ಧವಾಗಿ ವಿಭಜನೆಗೊಂಡಿದೆ" ಎಂದಿದ್ದರು.

ತಪ್ಪು ಗ್ರಹಿಕೆ

ಯುದ್ಧದ ಎರಡನೇ ಘಟ್ಟದಲ್ಲಿ, ಫ್ಯಾಸಿಸ್ಟ್ ಅಕ್ಷ ಕೂಟ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕಾರ್ಯಕಾರೀ ಸಮಿತಿಯ ಏಕಮಾತ್ರ ವಕ್ತಾರ, ಮಹಾತ್ಮಾಗಾಂಧಿ ಫ್ಯಾಸಿಸಂ ಮತ್ತು ಸಾಮ್ರಾಜ್ಯಶಾಹಿಯ ನಡುವೆ ಯಾವುದೇ ವ್ಯತ್ಯಾಸವಿಲ್ಲವೆಂದು ತನಗೆ ಕಂಡು ಬರುವುದಾಗಿ ಘೋಷಿಸಿದರು. ಮತ್ತು ಜಗತ್ತು ಫ್ಯಾಸಿಸ್ಟರ ಅಧೀನಗೊಳ್ಳುವ ವಿಪತ್ತು ಹೆಚ್ಚಿರುವುದನ್ನು ಕಾಣಲು ವಿಫಲರಾದರು. 1943 ರ ಜುಲೈ 14 ರಂದು ಅವರು ಗಮನಿಸಿದ್ದು ಇದು—

"ನನ್ನ ನಿಲುಮೆಯ ಸಾರಾಂಶವಿದು. ಒಂದು ವಿಷಯ, ನನ್ನ ಮಟ್ಟಿಗೆ ಒಂದು ವಿಷಯ ಗಟ್ಟಿ ಮತ್ತು ನಿಶ್ಚಿತ. ಮಿತ್ರ ಕೂಟದ ವಿಜಯ ನಿಶ್ಚಿತವಾಗಬೇಕಾದರೆ ಮಹಾನ್ ದೇಶವೊಂದು—"ದೇಶಗಳು" ಅಥವಾ "ಜನತೆಗಳು" ಅಲ್ಲ-ಅಸ್ವಾಭಾವಿಕವಾಗಿ ನಿಷ್ಪಾಂಗವೆರಗಬೇಕಾದ ಸ್ಥಿತಿ ಕೊನೆಗೊಳ್ಳಬೇಕು. ಫ್ಯಾಸಿಸ್ಟ್ ಮತ್ತು ನಾಝೀ ಶಕ್ತಿಗಳು ಹಾಗೂ ಮಿತ್ರದೇಶಗಳ ನಡುವೆ ಯಾವ ವ್ಯತ್ಯಾಸವೂ ನನಗೆ ಕಾಣುತ್ತಿಲ್ಲ. ಎಲ್ಲರೂ ಶೋಷಕರು. ಎಲ್ಲರೂ ತಮ್ಮ ಉದ್ದೇಶ ಸಾಧನೆಯಾಗುವ ಮಟ್ಟದವರೆಗೆ ನಿಷ್ಕರುಣೆಯಿಂದ ವರ್ತಿಸುತ್ತಾರೆ. ಅಮೆರಿಕಾ ಮತ್ತು ಬ್ರಿಟನ್ ಮಹಾನ್ ದೇಶಗಳು. ಆದರೆ ಆ ದೇಶಗಳ ಮಹಾನತೆ ಆಫ್ರಿಕದ ಅಥವಾ ಏಷ್ಯಾದ ಮಾನವಕುಲದ ದಾಪು ನಡೆಯೆದುರು ಧೂಳಿಗೆ ಸಮಾನ. ಅವರಿಗೆ ಮತ್ತು ಕೇವಲ ಅವರಿಗಷ್ಟೇ ಈ ತಪ್ಪನ್ನು ಸರಿಪಡಿಸುವ ಶಕ್ತಿಯಿರುವುದು. ತಮ್ಮ ಕೈಗಳ ಮಲಿನತೆಯನ್ನು ಸ್ವಚ್ಛ ಗೊಳಿಸಿಕೊಳ್ಳದಿದ್ದರೆ ಅವರಿಗೆ ಮಾನವ ಸ್ವಾತಂತ್ರ್ಯದ ಅಥವಾ ಬೇರಾವುದೇ ಮಾತನ್ನಾಡುವ

ಹೆಚ್ಚು ಇಲ್ಲ. ಆ ಅವಶ್ಯಕ ಸ್ವಚ್ಛತೆ ಅವರಿಗೆ ವಿಜಯಕ್ಕೆ ಬೇಕಾದ ಅತ್ಯಂತ ಭರವಸೆಯು ಏನು. ಯಾಕೆಂದರೆ ಕೋಟಿಗಟ್ಟಲೆ ಮೂಕ ಏಶ್ಯನ್ನರ ಮತ್ತು ಆಫ್ರಿಕನ್ನರ ಶುಭ ಹಾರೈಕೆಗಳು ಅಭಿವ್ಯಕ್ತ ಗೊಳಿಸದಿದ್ದರೂ ನಿಶ್ಚಿತವಾದ ಹಾರೈಕೆಗಳು — ಅವರಿಗೆ ಸಿಗುತ್ತವೆ. ಆಗ, ಮತ್ತು ಕೇವಲ ಆಗ ಮಾತ್ರ ಅವರೊಂದು ಹೊಸ ವ್ಯವಸ್ಥೆಗಾಗಿ ಹೋರಾಟ ನಡೆಸಿದಂತಾಗುತ್ತದೆ. ಇದೇ ವಾಸ್ತವ ಸಂಗತಿ. ಮತ್ತೆಲ್ಲಾ ಕೇವಲ ಊಹೆಗಳು. ಆದರೆ ಇದರಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಅವಕಾಶ ಕೊಟ್ಟಿರುವುದು ನಾನು ಪ್ರಸ್ತುತಪಡಿಸಿರುವ ಸೂಚನೆಯು ಅರ್ಥವೇನು ಎನ್ನುವುದನ್ನು ಮೂರ್ತ ರೂಪದಲ್ಲಿ ವಿವರಿಸುವುದಕ್ಕಾಗಿ."

1942 ರ ಏಪ್ರಿಲ್ 27 ರಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಚರ್ಚಿಸಿದ ಈ ಕೆಳಗಿನ ಅಂಶಗಳು ಜಾಗತಿಕ ಘಟನೆಗಳ ಬಗ್ಗೆ ಅದರ ಆಗಿನ ಯೋಚನೆ ಮತ್ತು ಗ್ರಹಿಕೆಯನ್ನು ಪ್ರಕಟಗೊಳಿಸುತ್ತವೆ. ರಾಷ್ಟ್ರೀಯ ವಿಮೋಚನಾ ಆಂದೋಲನದ ಪ್ರತಿನಿಧಿಗಳಿಗೆ ರಾಷ್ಟ್ರೀಯ ರಕ್ಷಣೆಯ ಭಾರವನ್ನು ವಹಿಸಿಕೊಡಲು ಬ್ರಿಟಿಶ್ ನಿರಾಕರಣೆಯನ್ನು ಪ್ರತಿಭಟಿಸುತ್ತಾ "ಜಪಾನ್‌ನ ಜಗಳ ಭಾರತದೊಂದಿಗಲ್ಲ. ಯುದ್ಧದಲ್ಲಿ ಭಾರತ ಭಾಗವಹಿಸಿದ್ದು ಭಾರತೀಯ ಜನತೆಯ ಪ್ರತಿನಿಧಿಗಳ ಒಪ್ಪಿಗೆಯಿಂದ ಅಲ್ಲ. (ಸೆಪ್ಟಂಬರ್ 1939 ರಿಂದ ಆಗಸ್ಟ್ 1942 ರ ಮೂರು ವರ್ಷಗಳ ಕಾಲವೂ ಇದೇ ನಿಲುವಾಗಿತ್ತು–ಎಂ. ಬಿ.) ಅದು ಕೇವಲ ಬ್ರಿಟಿಶ್ ಕ್ರಮ. ಭಾರತ ಸ್ವತಂತ್ರವಾದರೆ ಅದರ ಮೊದಲ ಹೆಜ್ಜೆ ಬಹುಶಃ ಜಪಾನ್‌ನೊಂದಿಗೆ ಮಾತುಕತೆ ನಡೆಸುವುದು." ಎಂದು ಗಮನಿಸಿತು.

ಕಾರ್ಯಕಾರೀ ಸಮಿತಿಯ ಚರ್ಚೆಯ ಸಮಯದಲ್ಲಿ ಜವಾಹರಲಾಲ್ ನೆಹರೂ ಹೇಳಿದರು— "ಇಂತಹ ಒಂದು ಕರಡು ಅವರ (ಬ್ರಿಟಿಶ್ ಸರ್ಕಾರ) ಸ್ಥಿತಿಯನ್ನು ದುರ್ಬಲಗೊಳಿಸುತ್ತದೆ. ಅವರು ಭಾರತವನ್ನು ಶತ್ರು ದೇಶವಾಗಿ ಪರಿಗಣಿಸಿ ಅದನ್ನು ಧೂಳೀಪಟಗೊಳಿಸುತ್ತಾರೆ. ರಂಗೂನ್‌ನಲ್ಲಿ ಅವರೇನು ಮಾಡಿದರೋ ಅದನ್ನೇ ಇಲ್ಲಿ ಮಾಡುತ್ತಾರೆ."

"ಈ ಕರಡಿನ ಸಮಸ್ತ ಹಿನ್ನೆಲೆ ಯಾವ ರೀತಿಯದೆಂದರೆ ನಾವು ನಿಷ್ಕ್ರಿಯವಾಗಿ ಅಕ್ಷಕೂಟದ ಶಕ್ತಿಗಳೊಂದಿಗೆ ಸೇರಿದ್ದೇವೆಂದು ಅನಿವಾರ್ಯವಾಗಿಯೇ ಜಗತ್ತು ಯೋಚಿಸುವಂತಾಗಬಹುದು. ಬ್ರಿಟಿಶರನ್ನು ವಾಪಸು ಹೋಗಲು ಹೇಳಲಾಗಿದೆ. ಈ ವಾಪಸಾತಿಯ ನಂತರ ನಾವು ಜಪಾನಿನೊಂದಿಗೆ ಮಾತುಕತೆ ನಡೆಸುತ್ತೇವೆ ಮತ್ತು ಕೆಲವು ಒಪ್ಪಂದಗಳಿಗೆ ಬರುತ್ತೇವೆ. ಈ ಒಪ್ಪಂದಗಳಲ್ಲಿ ನಮಗೆ ಬಹಳ ಪ್ರಮಾಣದ ನಾಗರಿಕ ಹಕೋಟ ಸಿಗಬಹುದು, ಅವರಿಗೆ ನಿರ್ದಿಷ್ಟ ಪ್ರಮಾಣದ ಸೈನಿಕ ಹತೋಟಿ ಸಿಗಬಹುದು, ಮತ್ತು ಭಾರತದ ಮೂಲಕ ಸೈನ್ಯಗಳು ಹಾದುಹೋಗಬಹುದು ಇತ್ಯಾದಿ."

ವಿರೋಧಾ ಭಾಸದ ನಿಲುವು

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅದೇ ಕಂಡಿನಲ್ಲಿ ಮುಂದೆ "ಜಪಾನೀ ಸರಕಾರಕ್ಕೆ ಮತ್ತು ಜನತೆಗೆ ಭಾರತ ಜಪಾನ್ ವಿರುದ್ಧವಾಗಲಿ ಅಥವಾ ಬೇರಾವುದೇ ದೇಶದ ವಿರುದ್ಧವಾಗಲೀ ವೈರಭಾವ ಹೊಂದಿಲ್ಲ ಎಂದು ಈ ಸಮಿತಿ ಭರವಸೆ ನೀಡಬಯಸುತ್ತದೆ.

ಭಾರತ ಎಲ್ಲಾ ವಿದೇಶೀ ಪ್ರಾಬಲ್ಯದಿಂದ ಸ್ವಾತಂತ್ರ್ಯ ಬಯಸುತ್ತದಷ್ಟೆ".

'ಆದ್ದರಿಂದ ಜಪಾನ್ ಭಾರತದ ಬಗ್ಗೆ ಯಾವುದೇ ಕುತಂತ್ರ ಹೊಂದಿಲ್ಲ ಎಂದು ಈ ಸಮಿತಿ ಆಶಿಸುತ್ತದೆ" ಇತ್ಯಾದಿ ಅಂಶಗಳನ್ನು ಸೇರಿಸಲಾಗಿದೆ.

ತದ್ವಿರುದ್ಧವಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ 1939ರ ಹೇಳಿಕೆಯನ್ನು (ಸೆಪ್ಟಂಬರ್ 1939) ಉದ್ಧರಿಸೋಣ. ಈ ಹೇಳಿಕೆ ಫ್ಯಾಸಿಸಂ, ಅದು ಜರ್ಮನ್, ಇಟಾಲಿಯನ್ ಅಥವಾ ಜಪಾನೀ ಮಾದರಿಯದಾಗಿರಲಿ, ಎಲ್ಲವೂ ಮಾನವಕುಲಕ್ಕೊಂದು ದೊಡ್ಡ ವಿಪತ್ತು ಎಂದು ಖಂಡಿಸಿತ್ತು. "ಫ್ಯಾಸಿಸಂ ಮತ್ತು ನಾಝಿಸಂನ ತತ್ವ ಮತ್ತು ಆಚರಣೆಯನ್ನು, ಯುದ್ಧ ಮತ್ತು ಹಿಂಸೆಯನ್ನು ಭವ್ಯೀಕರಿಸುವುದನ್ನು ಮತ್ತು ಮಾನವ ಚೇತನವನ್ನು ದಮನ ಮಾಡುವುದನ್ನು ಸಂಪೂರ್ಣವಾಗಿ ನಿರಾಕರಿಸುತ್ತದೆ ಎಂದು ಕಾಂಗ್ರೆಸ್ ಬಾರಿ ಬಾರಿಗೂ ಘೋಷಿಸಿದೆ.

ಅವರು ಆಗಾಗ ತೊಡಗಿದ ಆಕ್ರಮಣಗಳನ್ನು, ಸರ್ವಮಾನ್ಯ ನೀತಿಗಳನ್ನು ಮತ್ತು ನಾಗರಿಕ ವರ್ತನೆಯ ಮಟ್ಟವನ್ನು ಕೊಚ್ಚಿ ಹಾಕಿರುವುದನ್ನು ಖಂಡಿಸುತ್ತಾ ಬಂದಿದೆ.

ಭಾರತೀಯ ಜನತೆ ಹಲವು ವರ್ಷಗಳಿಂದ ಯಾವ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಿದರೋ ಅದು ಫ್ಯಾಸಿಸಂ ಮತ್ತು ನಾಝಿಸಂನಲ್ಲಿ ತಾವು ಗೊಂಡಿರುವುದನ್ನು ಕಂಡಿದೆ. ಆದ್ದರಿಂದ ಪೋಲೆಂಡ್ ಮೇಲೆ ಜರ್ಮನಿಯ ನಾಝೀ ಸರಕಾರದದಾಳಿಯನ್ನು ಕಾರ್ಯಕಾರೀ ಸಮಿತಿ ಹಿಂದೆ ಮುಂದೆ ನೋಡದೆ ಖಂಡಿಸಬೇಕು. ಮತ್ತು ಆ ಆಕ್ರಮಣವನ್ನು ಪ್ರತಿರೋಧಿಸುತ್ತಿರುವವರಿಗೆ ಸಹಾನುಭೂತಿ ವ್ಯಕ್ತ ಪಡಿಸಬೇಕು."

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಂದಾಳು ಗಾಂಧಿ ಜರ್ಮನ್ ನಾಝಿವಾದ, ಇಟಾಲಿಯನ್ ಫ್ಯಾಸಿಸಂ ಮತ್ತು ಜಪಾನೀ ಸೈನಿಕವಾದದ ಬೆಳವಣಿಗೆಯನ್ನು ಖಂಡಿಸುತ್ತಾ ಬ್ರಿಟನ್, ರಷ್ಯಾ, ಚೀನಾ ಮತ್ತು ಫ್ರಾನ್ಸಿನವಾದಕ್ಕೆ ಸಹಾನುಭೂತಿ ವ್ಯಕ್ತಪಡಿಸುತ್ತಾರೆ ಮತ್ತು ಫ್ಯಾಸಿಸ್ಟ ಆಕ್ರಮಣಕಾರರ ಕೈಯಲ್ಲಿ ಬ್ರಿಟೀಶ್ ಪಾರ್ಲಿಮೆಂಟ್ ಭವನ, ವೆಸ್ಟ್‌ಮಿನಿಸ್ಟರ್ ಹಾಗೂ ಇತರ ಸ್ಮಾರಕಗಳ ವಿನಾಶದ ಸಾಧ್ಯತೆಯ ಬಗ್ಗೆ ತೀವ್ರ ಆತಂಕ ಹಾಗೂ ಭಯ ತೋರ್ಪಡಿಸುತ್ತಾರೆ.

ಆದರೆ ಅದೇ ಉಸುರಿನಲ್ಲಿ ಜರ್ಮನಿ ಇಟಲಿ ಮತ್ತು ಜಪಾನಿನ ಈ ಕರಾಳ ಶಕ್ತಿಗಳ ವಿರುದ್ಧ ನಡೆಯುತ್ತಿರುವ ಯುದ್ಧವನ್ನು ಫ್ಯಾಸಿಸ್ಟ ವಿರೋಧೀ ಜಾಗತಿಕ ಯುದ್ಧ ಜನತಾ ಯುದ್ಧ ಮತ್ತು ಫ್ಯಾಸಿಸ್ಟ ದಾಸ್ಯದ ಬೆದರಿಕೆಯಿಂದ ಸಮಸ್ತ ಮಾನವಕುಲದ ವಿಮೋಚನೆಯ ಯುದ್ಧ ಎಂದು ಹೇಳಿದರೆ ಅದಕ್ಕೆ ಅಸಹ್ಯ ಪಡುತ್ತಾರೆ.

ಎರಡು ವರ್ಗಗಳು, ಎರಡು ಅಳತೆಗೋಲುಗಳು, ಎರಡು ಪರಸ್ಪರ ಬೇರೆಯಾದ ಅರ್ಥ ವಿವರಣೆಗಳು ಮತ್ತು ಎರಡು ಪರಸ್ಪರ ಭಿನ್ನವಾದ ಪ್ರೇರಕಾಂಶಗಳು ! ಬೇರೆಲ್ಲಾ ಪ್ರಶ್ನೆಗಳಂತೆ ಎರಡನೇ ಜಾಗತಿಕ ಯುದ್ಧದ ಗುಣ ವಿವರಣೆಯಲ್ಲೂ ಎರಡು ಪರಸ್ಪರ ಬೇರೆಯಾದ ದೃಷ್ಟಿಕೋನಗಳು-ಕಮ್ಯೂನಿಸ್ಟರದ್ದು ಮತ್ತು ಕಾಂಗ್ರೆಸ್ಸಿಗರದ್ದು–ಎರಡು ವಿರುದ್ಧವಾಗಿದ್ದವು. ಒಂದು ಕಾರ್ಮಿಕ ವರ್ಗದ ದೃಷ್ಟಿಕೋನ - ಕಾರ್ಮಿಕರು ಮತ್ತು ಜನತೆಗಳ ನಡುವೆ ಅಂತರರಾಷ್ಟ್ರೀಯ ಸೌಹಾರ್ದತೆ ಉಂಟು ಮಾಡುವ ದೃಷ್ಟಿಕೋನ, ಇನ್ನೊಂದು ಸಂಕುಚಿತವಾದವನ್ನು ಪೋಷಿಸುವ ಬೂರ್ಜ್ವಾ ದೃಷ್ಟಿಕೋನ.

ಕಾಂಗ್ರೆಸ್ ಹಿಂಜರಿಕೆ

ಎರಡನೇ ಮಹಾಯುದ್ಧದ ಸ್ವಭಾವವನ್ನು ಅರಿತುಕೊಳ್ಳುವಲ್ಲಿ ಕಾಂಗ್ರೆಸ್ ನಾಯಕತ್ವ ವಿಫಲವಾಯಿತು ಇದನ್ನು ನಾನು ಪುನರುಚ್ಚರಿಸುತ್ತೇನೆ ಮೊದಲ ಘಟ್ಟದಲ್ಲಿ ನಾಝಿ ಹಿಟ್ಲರ್, ಫ್ಯಾಸಿಸ್ಟ್ ಮುಸೋಲಿನಿ ಮತ್ತು ಸೈನಿಕವಾದೀ ತೋಜೋ ಬ್ರಿಟಿಶ್, ಫ್ರೆಂಚ್ ಮತ್ತು ಇತರ ಸಾಮ್ರಾಜ್ಯಶಾಹೀ ಶಕ್ತಿಗಳೊಂದಿಗೆ ಯುದ್ಧದಲ್ಲಿ ತೊಡಗಿದ್ದ ಮೂರು ವರ್ಷಗಳ ಕಾಲ ಕಾಂಗ್ರೆಸ್ ನಾಯಕತ್ವ ಉಭಯ ಸಂಕಟದಲ್ಲಿ ಸಿಲುಕಿಕೊಂಡಿತ್ತು. ನಾಝಿ ಹಿಟ್ಲರ್ ಮತ್ತು ಸಾಮ್ರಾಜ್ಯಶಾಹೀ ಬ್ರಿಟನ್ನಿನ ನಡುವಿನ ಯುದ್ಧವಾಗಿ ಅದು ಆರಂಭವಾಯಿತು ಎಂದು ಅವರು ಸಾರಿದರೂ ಕೂಡ ಅವರು ಬ್ರಿಟಿಶ ಸರಕಾರದೊಂದಿಗೆ ಪತ್ರ ವ್ಯವಹಾರ, ಮಾತುಕತೆ ನಡೆಸಿದರೇ ಹೊರತು ಅವರು ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಕಮ್ಯೂನಿಸ್ಟರಂತೆ ಹೋರಾಡಲು ಯಾವುದೇ ಪರಿಣಾಮಕಾರಿ ಪ್ರಯತ್ನ ಮಾಡಲಿಲ್ಲ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಅದರ ನಿರ್ವಿವಾದ ನಾಯಕ ಗಾಂಧಿ 1939–42 ರ ಅವಧಿಯಲ್ಲಿ ಬ್ರಿಟಿಶರಿಗೆ ಒಂದು ಬಲವಾದ ಆಘಾತ ಉಂಟುಮಾಡುವ ಬಗ್ಗೆ ಬಹಳ ನಿರಾಶ ಭಾವನೆ ಮತ್ತು ಹಿಂಜರಿಕೆ ತೋರ್ಪಡಿಸಿದರು.

ಈ ಅವಧಿಯಲ್ಲಿ ಒಂದು ಸಾಮೂಹಿಕ ರಾಷ್ಟ್ರೀಯಆಘಾತಬಹುಶಃ ಬ್ರಿಟಿಶ್ ಆಳರಸರನ್ನು ಮಂಡಿಯೂರಿ ಒಂದು ಇತ್ಯರ್ಥಕ್ಕಾಗಿ ಕೇಳಿಕೊಳ್ಳುವಂತೆ ಮಾಡುವ ಸಾಧ್ಯತೆಯಿತ್ತು. ಆದ್ದರಿಂದ ತೀವ್ರ ಹಿಂಜರಿಕೆ, ಸಂದಿಗ್ಧತೆಯಿಂದಾಗಿ ಕಾಂಗ್ರೆಸ್ ನಾಯಕತ್ವ, ಬ್ರಿಟಿಶ್ ಸಾಮ್ರಾಜ್ಯಶಾಹೀ ಆಳ್ವಿಕೆಯ ವಿರುದ್ಧ "ಮಾಡು ಇಲ್ಲವೆ ಮಡಿ" ಮಾದರಿಯ ಹೋರಾಟ ಆರಂಭಿಸಲು ಹಿಂದೇಟು ಹಾಕಿತು.

ಇಂತಹ ನೈತಿಕ ಧೈರ್ಯ ಮತ್ತು ರಾಜಕೀಯ ಪ್ರಾಮಾಣಿಕತೆಯನ್ನು ಕಾಂಗ್ರೆಸ್ ನಾಯಕರಿಂದಲೂ ನಿರೀಕ್ಷಿಸಿದೆವು. ಆದರೆ ಅವರಾಗಲೀ, ಅವರಿಗಾಗಿ ಲೇಖನಿ ಓಡಿಸುವ ಬುದ್ಧಿ ಜೀವಿಗಳಾಗಲಿ ಈ ಮಾರ್ಗ ಅನುಸರಿಸುವ ಧೈರ್ಯ ಮಾಡಲಿಲ್ಲ ಎಂಬುದು ಬಹಳ ವಿಷಾದದ ಸಂಗತಿ ಆತ್ಮಪರಿಶೋಧನೆಯೆಂದರೆ ಅವರು ಥರ ಥರನೆ ನಡುಗುತ್ತಾರೆ ಮತ್ತು ಅರ್ಥವಿಮರ್ಶೆಯೆಂದರೆ ಮರಣ ಭಯ ಅವರಿಗೆ. ಕಮ್ಯುನಿಸ್ಟ ವಿರೋಧೀ ಅಪಲಾಪ ಮತ್ತು ಆತ್ಮಶ್ಲಾಘನೆಯಲ್ಲೇ ಅವರು ಉದ್ಧಾರ ಹೊಂದ ಬಯಸುತ್ತಾರೆ.

ರಾಷ್ಟ್ರವ್ಯಾಪೀ ಸಾಮೂಹಿಕ ಹೋರಾಟವೊಂದನ್ನು ಆರಂಭಿಸುವಲ್ಲಿ ಈ ಮೂರು ವರ್ಷಗಳ ಕಾಲಹರಣವನ್ನು ಒಂದಿಲ್ಲೊಂದು ನೆವ ಹೇಳಿ ಸಮರ್ಥಿಸಿಕೊಳ್ಳಲಾಗುತ್ತದೆ ಈ ಬಗ್ಗೆ ಆತ್ಮವಿಮರ್ಶೆಯ ಮತ್ತು ಆತ್ಮಪರಿಶೀಲನೆಯ ಒಂದಾದರೂ ಮಾತು ಕಾಂಗ್ರೆಸ್ ದಾಖಲೆಗಳಲ್ಲಿರುವುದಿಲ್ಲ ಕಾಂಗ್ರೆಸ್‌ನ ಚರಿತ್ರೆಯ ಪುಟಗಳಲ್ಲೂ ಕಾಣಸಿಗುವುದಿಲ್ಲ. ಮಹಾತ್ಮಾ ಗಾಂಧಿಯ ಸಮಸ್ತ ಸಂಕಲಿತ ಕೃತಿಗಳಲ್ಲಿಯೂ ಎಲ್ಲೂ ಕೂಡಾ ಇಂತಹ ಒಂದು ಪ್ರಸ್ತಾಪ ಕಾಣಸಿಗುವುದಿಲ್ಲ ಅದೇ ರೀತಿ ಭಾರತದಲ್ಲಿ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಸಮರಶೀಲ ಪ್ರತಿಭಟನೆ ನಡೆಸಬೇಕೆಂದು ಪ್ರತಿಪಾದಿಸಿ, ಆ ದಿಕ್ಕಿನಲ್ಲಿ ಹೆಜ್ಜೆಯಿಟ್ಟು ಕಾಂಗ್ರೆಸ್‌ನ ವಿಳಂಬ ನೀತಿಯನ್ನು ಟೀಕಿಸಿದ ಕಮ್ಯೂನಿಸ್ಟರು ಮತ್ತು ಇತರರ ಬಗ್ಗೆ ಒಂದಾದರೂ ಮಾತು ಎಲ್ಲೂ ಕಾಣಸಿಗುತ್ತಿಲ್ಲ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಮರಶೀಲತೆ, ವಿರಲಾರಂಭಿಸಿದ್ದು ಜಗತ್ತನ್ನು ಅಧೀನಪಡಿಸಿಗೊಳ್ಳುವ ಫ್ಯಾಸಿಸ್ಟ ವಿಪತ್ತು ಕ್ರಮೇಣ ಹೆಚ್ಚಲಾರಂಭಿಸಿದಾಗಲೇ ಯುದ್ಧದ ಮೊದಲ ಘಟ್ಟದಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹೀ ಆಳ್ವಿಕೆಯ ವಿರುದ್ಧ ಸಕ್ರಿಯ ಹೋರಾಟದ ಎಲ್ಲಾ ಪ್ರಸ್ತಾಪಗಳ ಬಗ್ಗೆ ಓಲಾಡುತ್ತಿದ್ದು ಅವನ್ನೆಲ್ಲಾ ವಿರೋಧಿಸಿದ್ದರು. ಆದರೆ ಮುಂದಿನ ಘಟ್ಟದಲ್ಲಿ ಬರ್ಲಿನ್-ರೋಮ್ ಟೋಕಿಯೋದ ಅಕ್ಷಶಕ್ತಿಗಳ ಅಪಾಯ ಹಲವು ಪಟ್ಟು ಹೆಚ್ಚಿದಾಗ ಹಿಟ್ಲರ್ ಮಾದರಿ ಆಕ್ರಮಣದ ವಿರುದ್ಧ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಹೇಳಿಕೆಗಳಲ್ಲಿರುತ್ತಿದ್ದ ಸಮರಶೀಲತೆ ಮತ್ತು ನೈತಿಕ ಕೋಪ ಕ್ರಮೇಣ ತಣ್ಣಗಾಗಲಾರಂಭಿಸಿತು. ಅದಕ್ಕೆ ಬದಲಾಗಿ ಕಾಂಗ್ರೆಸ್ ನಾಯಕರು ರಾಜಕೀಯ ನಿರಾಸೆಯ ಹಂತ ತಲುಪಿದರು.

ವಿರೋಧಾಭಾಸದ ಪರಾಕಾಷ್ಠೆ

ಹೀಗೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಟದ ನಡುವೆ ಬ್ರಿಟಿಶ್ ಗುಲಾಮರಾಗಿದ್ದ ಭಾರತವೂ ಸೇರಿದಂತೆ ಎಲ್ಲ ದೇಶಗಳ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸ್ವಾಧೀನತೆಗೆ ಪಟ್ಟುತ್ತಲಿದ್ದ ಫ್ಯಾಸಿಸ್ಟ ವಿಪತ್ತಿನ ಹೆಚ್ಚುತ್ತಿದ್ದ ಸಾಮರ್ಥ್ಯವನ್ನು ವಾಸ್ತವದೃಷ್ಟಿಯಿಂದ ಅಂದಾಜು ಮಾಡುವಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ವಿಫಲಗೊಂಡಿತು. ಆದ್ದರಿಂದಲೇ ಎರಡನೇ ಮಹಾಯುದ್ಧದ ಫ್ಯಾಸಿಸ್ಟ್ ವಿರೋಧೀ ಘಟ್ಟವನ್ನು ನ್ಯಾಯೋಚಿತವಾಗಿಯೇ ಜನತಾ ಯುದ್ಧ ಎಂದು ವರ್ಣಿಸಬಹುದೆಂಬ ವಾಸ್ತವ ಸಂಗತಿಯನ್ನು ಮನವರಿಕೆ ಮಾಡಿಕೊಳ್ಳುವುದು ಅದಕ್ಕೆ ಸಾಧ್ಯವಾಗಲಿಲ್ಲ.

ಚೀನಾ ಮತ್ತು ಇತರ ಏಷ್ಯನ್ ದೇಶಗಳ ಅತಿಕ್ರಮಣ ನಡೆಸಿದ್ದಕ್ಕಾಗಿ ಜಪಾನೀ ಆಕ್ರಮಣಕಾರರನ್ನು ದೃಢವಾಗಿ ಖಂಡಿಸಿದ ಮೇಲೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ "ಜಪಾನಿನ ಜಗಳ ಭಾರತದೊಂದಿಗಲ್ಲ" ಎಂಬ ಹೇಯ ಹೇಳಿಕೆ ದಾಖಲಾದದ್ದು ನಿಜಕ್ಕೂ ವಿರೋಧಾಭಾಸದ ಪರಾಕಾಷ್ಠೆಯೇ ಸರಿ.

ಮಾನವ ಕುಲದ ಅಪಾರ ಜನವಿಭಾಗಗಳು ಫ್ಯಾಸಿಸಂನ ಬೂಟುಕಾಲಡಿಯಲ್ಲಿ ನರಳಾಡುತ್ತಿದ್ದ ಸಮಯದಲ್ಲಿ ಕಾಂಗ್ರೆಸ್ ನಾಯಕತ್ವ ಫ್ಯಾಸಿಸಂ ಸಮಸ್ತ ಜಗತ್ತಿನ ಜನಗಳಿಗೆ ಒಡ್ಡಿದ ಬೆದರಿಕೆಯನ್ನು ಹಗುರವಾಗಿ ಪರಿಗಣಿಸಿ ಅಗತ್ಯ ಬಿದ್ದರೆ ಜಪಾನಿನೊಂದಿಗೆ ಮಾತುಕತೆಗಳನ್ನು ನಡೆಸಬಹುದೆಂಬ ಪ್ರಸ್ತಾಪ ಮುಂದಿಡುವ ಮಟ್ಟದವರೆಗೂ ಹೋಯಿತು. ಅದರ ರಾಜಕೀಯ ತಿಳುವಳಿಕೆಯ ಸಂಪೂರ್ಣ ದಿವಾಳಿಕೋರತನ ಇದರಿಂದಾಗಿ ಬಯಲಾಯಿತು.

ಅದು ವಾಸ್ತವವಾಗಿಯೂ ಫ್ಯಾಸಿಸ್ಟ್ ವಿರೋಧೀ ಜನತಾ ಯುದ್ಧವೇ ಆಗಿತ್ತು ಎಂಬುದನ್ನು ಇತಿಹಾಸ ಸಂಶಯಕ್ಕೆಡೆಯಿಲ್ಲದಂತೆ ತೋರಿಸಿಕೊಟ್ಟಿದೆ. ಸೋವಿಯತ್ ಸಂಘದೊಂದಿಗೆ ಫ್ಯಾಸಿಸ್ಟ ವಿರೋಧೀ ಶಿಬಿರವನ್ನು ನಿರ್ವಾಹವಿಲ್ಲದೆ ಸೇರಬೇಕಾಗಿ ಬಂದ ಸಾಮ್ರಾಜ್ಯಶಾಹೀ ಶಕ್ತಿಗಳು

(6ನೇ ಪುಟ ನೋಡಿ)

ಪಂಜಾಬ್ ಬಿಕ್ಕಟ್ಟಿನ ಏರಿಳಿವುಗಳು ಹಾಗೂ ತಿರುವುಗಳು

(3ನೇ ಪುಟದಿಂದ)

ಸಂತ ಲೊಂಗೊವಾಲ್ ಹಾಗೂ ಭಿಂದ್ರನ್‌ವಾಲೆ ಮಧ್ಯೆ ಸೌಹಾರ್ದಯುತ ಸಂಬಂಧವಿರಲಿಲ್ಲವೆಂಬುದೂ ಹಾಗೆಯೇ ಭಯೋತ್ಪಾದಕರ ಹಕ್ಕಿಗೆ ಬಲಿಯಾಗಬೇಕಾದವರ ಪಟ್ಟಿಯಲ್ಲಿ ಶ್ರೀ ಪ್ರಕಾಶ್ ಸಿಂಗ್ ಬಾದಲ್ ಅವರ ಹೆಸರಿತ್ತೆಂಬುದೂ ನಮಗೆ ತಿಳಿದಿದೆ. ಆದರೆ ರಾಷ್ಟ್ರವಿರೋಧಿ ಶಕ್ತಿಗಳಿಂದ ಸ್ವರ್ಣಮಂದಿರವನ್ನು ಮುಕ್ತಗೊಳಿಸಿ ಅದರ ಪಾವಿತ್ರ್ಯವನ್ನು ರಕ್ಷಿಸುವ ದೃಢ ನಿಲುವನ್ನು ವ್ಯಕ್ತಗೊಳಿಸುವ ಧೈರ್ಯವನ್ನು ಮಾತ್ರ ಯಾರೂ ತೋರಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಆಂದೋಲನವೇ ಉಗ್ರವಾದಿಗಳ ಹಿಡಿತದಲ್ಲಿ ನುಣುಚಿಕೊಳ್ಳುವುದಕ್ಕೆ ಅವಕಾಶವೀಯಲಾಯಿತು.

ಮಾಸ್ಟರ್ ತಾರಾಸಿಂಗ್ ನಾಲ್ಕು ದಶಕಗಳ ಕಾಲ ಅಕಾಲಿ ದಳದ (ಶಿರೋಮಣಿ ಗುಂಪಿನ) ನಾಯಕರಾಗಿದ್ದರು. ಹಲವಾರು ಮೋರ್ಚಾಗಳನ್ನು ಸಂಘಟಿಸಿದರು, ಆತನ ಜೊತೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಮೂಲಭೂತ ಭಿನ್ನಾಭಿಪ್ರಾಯಗಳನ್ನು ನಾವು ಹೊಂದಿರಬಹುದು. ಆದರೆ ಆಂದೋಲನ ತನ್ನ ಹಿಡಿತದಿಂದ ನುಣುಚಿಕೊಳ್ಳುವದಕ್ಕಾಗಲಿ ರಾಷ್ಟ್ರವಿರೋಧಿ ಉದ್ದೇಶಗಳಿಗೆ ಗುರುದ್ವಾರಗಳನ್ನು ಬಳಸಿ ಕೊಳ್ಳುವದಕ್ಕಾಗಲಿ ಆತನೆಂದೂ ಅವಕಾಶ ಕೊಡಲಿಲ್ಲ. ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸಂತ ಲೊಂಗೊವಾಲ್ ಅವರೂ ಸರ್ವಾಧಿಕಾರಿ ಆಡಳಿತದ ವಿರುದ್ಧ ನಡೆದ ಯಶಸ್ವೀ ಹೋರಾಟಗಳ ಮುಂಚೂಣಿಯಲ್ಲಿದ್ದು ಜನತೆಯ ಸಹಾನುಭೂತಿ ಮತ್ತು ಬೆಂಬಲವನ್ನು ಗಳಿಸಿಕೊಂಡಿದ್ದರು.

ಸ್ವಂತಘೋಷಣೆಯ ಬಂಧಿಗಳು

ಈ ಸಂದರ್ಭದಲ್ಲೇಕೆ ಆ ಸ್ಥಿತಿ ಬದಲಾಗಿದೆ? ಅಕಾಲಿ ಧುರೀಣತ್ವ ತನ್ನದೇ ಘೋಷಣೆಗಳ ಬಲೆಯಲ್ಲಿ ಬಂಧಿಯಾಗಿದೆ ಎಂಬುದೇ ಇದಕ್ಕೆ ಉತ್ತರ. ಅಂದರೆ ಅಕಾಲಿ ನಾಯಕರು ತಮ್ಮ ಬಲೆಯಲ್ಲೇ ಉಗ್ರವಾದಿಗಳಿಂದ ಹಿಡಿದಿಡಲ್ಪಟ್ಟಿದ್ದಾರೆ. ಅಕಾಲಿಗಳು ಶಿಖರ ಮೇಲ್ಮೆ ಇರುವ ರಾಜ್ಯವೊಂದರ ರಚನೆಯನ್ನು ಪ್ರತಿಪಾದಿಸುವ ಆನಂದಪುರ ಸಾಹಿಬ್ ಗೊತ್ತುವಳಿಗೆ ಒಮ್ಮೆ ಅಂಟಿಕೊಂಡ ಮೇಲೆ ಸಿಖ್ ಸಮುದಾಯವೊಂದು ಪ್ರತ್ಯೇಕ ರಾಷ್ಟ್ರವೆಂಬ ಸಿದ್ಧಾಂತವನ್ನೊಪ್ಪಿಕೊಂಡ ಮೇಲೆ ತಮ್ಮ ಧರ್ಮ ಮತ್ತು ರಾಜಕಾರಣ ಜೊತೆ ಜೊತೆಯಾಗೇ ಸಾಗುತ್ತವೆಂದು ಪ್ರತಿಪಾದಿಸಿದ ಮೇಲೆ ಮತ್ತು ತಕ್ಷಣವೇ ಸಂವಿಧಾನದ 25 ನೇ ಕಲಮು ಹಾಗೂ ಸಿಖ್ ವೈಯಕ್ತಿಕ ಕಾನೂನುಗಳ ತಿದ್ದುಪಡಿಯ ಬೇಡಿಕೆಗಳನ್ನು ಮುಂದಿಟ್ಟ ಮೇಲೆ ಪ್ರತ್ಯೇಕವಾದಿ ಹಾಗೂ ವಿಧ್ವಂಸಕ ಶಕ್ತಿಗಳಿಂದ ಅವರು ತಮ್ಮನ್ನೇ ತಾವು ಪ್ರತ್ಯೇಕಿಸಿ ಕೊಳ್ಳಲಾರರಾದರು.

ಅಕಾಲಿ ಧುರೀಣರು ವಿರೋಧಿಸುತಿದ್ದ ಖಲಿಸ್ತಾನದ ಸೈದ್ಧಾಂತಿಕ ಬೇರು ಮೇಲ್ಕಂಡ ಘೋಷಣೆಗಳಲ್ಲಿಯೇ ಇದೆ ಇಂಥ ಘೋಷಣೆಗಳು ಜಾತ್ಯಾತೀತ ರಾಷ್ಟ್ರದ ಮೂಲವನ್ನೇ ನಾಶಮಾಡುತ್ತವೆ. ಆದ್ದರಿಂದ ಪರಿಣಾಮದ ವಿವೇಚನೆಯಿಲ್ಲದೆ ಅವರು ಪ್ರತಿಪಾದಿಸುತ್ತಿರುವುದು ಒಂದು ಧರ್ಮಾಂಧ ಪ್ರಭುತ್ವದ ಸ್ಥಾಪನೆ ಅಂದರೆ ಅದು ಖಲಿಸ್ಥಾನ.

ಈ ತೆರದ ಧರ್ಮದ ಆಧಾರದಲ್ಲೇ ಪಾಕಿಸ್ತಾನ ಸ್ಥಾಪನೆಯಾಯಿತೆಂದೂ ಆದರೆ ಅದು ಒಂದಾಗುಳಿಯಲು ಸಾಧ್ಯವಾಗಿಲ್ಲೆಂಬ ಸಂಗತಿ ಇವರಿಗೆ ಗೊತ್ತು. ಪೂರ್ವ ಬಂಗಾಲದ ಜನರ ರಾಷ್ಟ್ರೀಯ ಭಾವನೆಯ ಒತ್ತಾಯದಿಂದಾಗಿ ಪಾಕಿಸ್ತಾನ ಎರಡು ರಾಜ್ಯಗಳಾಗಿ ವಿಂಗಡಿಸಲ್ಪಟ್ಟಿತು. ಈಗಿರುವ ಪಾಕಿಸ್ತಾನದಲ್ಲಿ ಕೂಡ-ಸಿಂಧಿ, ಬಲೂಚಿ, ಮತ್ತು ಪಠಾಣರು-ಹೆಚ್ಚಿನ ಸ್ವಾಯತ್ತತೆಗಾಗಿ ಹೋರಾಡುತ್ತಿದ್ದಾರೆ. ಇಸ್ಲಾಮಿ ಧರ್ಮದ ಮೇಲೆ ಆಧರಿಸಲ್ಪಟ್ಟಿದೆಂದು ಹೇಳಿಕೊಳ್ಳುವ ಝಿಯಾ ಮಿಲಿಟರಿ ಆಡಳಿತೆಯ ವಿರುದ್ಧ ಪ್ರಜಾಪ್ರಭುತ್ವ ವ್ಯವಸ್ಥಾಪನೆಗಾಗಿ ಇವರೆಲ್ಲ ಒಗ್ಗಟ್ಟಾಗಿದ್ದಾರೆ. ಭಾರತದ ಈಗಿನ ಆಧಿಪತ್ಯ ಯಾವ ರೀತಿ ಹಿರಿ ಬಂಡವಲದಾರರ, ಭೂಮಾಲಕರ ಹಿತರಕ್ಷಣೆ ಮಾಡುತ್ತದೋ ಅದೇ ರೀತಿಯಲ್ಲಿ ಒಂದು ವರ್ಗ ಸಮಾಜದಲ್ಲಿ ವರ್ಗದ ಹಿತವೇ ಪ್ರಾಧಾನ್ಯವಾಗಿರುತ್ತದೆ. ಸಿಖರ ಧರ್ಮದ ಮೇಲೆ ಆಧರಿತ ಆಧಿಪತ್ಯ ಯಾವ ವರ್ಗವನ್ನು ಪ್ರತಿನಿಧೀಕರಿಸುತ್ತದೆ.

ಸಿಖರ ಧರ್ಮಕ್ಕೆ ಸೇರಿದ್ದೇವೆಂದು ಹೇಳಿಕೊಂಡು ಸಿಖ ಉದ್ಯಮಿ ಸಿಖರಿಗೆ ಹೆಚ್ಚು ವೇತನ ಕೊಡುತಾನೆಯೇ? ಅಥವಾ ಒಬ್ಬ ಸಿಖ ಭೂಮಾಲಕ ತನ್ನ ಉತ್ಪನ್ನದ ಹೆಚ್ಚಿನ ಪಾಲನ್ನು ರೈತರಿಗಾಗಲೀ, ಹೆಚ್ಚುವರಿ ಭೂಮಿಯನ್ನಾಗಲೀ ಶಿಖ ರೈತರಿಗೆ ಕೃಷಿ ಕಾರ್ಮಿಕರಿಗೆ ಕೊಡ ಮಾಡುತ್ತಾನೆಯೇ? ವರ್ಗದ ಹಿತರಕ್ಷಣೆ ಬಂದಾಗ ಶಿಖ ಉದ್ಯಮ, ಸಿಖ ಭೂಮಾಲಕರೆಲ್ಲ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಮತ್ತಿನ್ನಿತರ ಜಾತಿಯ ವರ್ಗದೊಡನೆ ಸೇರಿಕೊಳ್ಳುತ್ತಾರೆಂದು ನಮಗೆ ಗೊತ್ತಿದೆ. ಕಾರ್ಮಿಕ ವರ್ಗವನ್ನು, ಕೃಷಿ ಕೂಲಿಗಾರರನ್ನು, ನೌಕರರನ್ನೂ ಹಾಗೆಯೇ ಇತರ ದುಡಿಯುವ ಜನತೆಯನ್ನು ವಿಭಜಿಸಿ ಅವರ ಐಕ್ಯತೆಯನ್ನು ಮುರಿದು ಬಂಡವಲದಾರರ—ಭೂಮಾಲಕರ ಹಿತರಕ್ಷಣೆ ಸಲುವಾಗಿ ಅಂಥ ಘೋಷಣೆ ಘೋಷಿಸಲಾಗುತ್ತಿದೆ.

ಮುಖಂಡತ್ವದ ಸಡಿಲಿಕೆ

ದೇಶದ ಇತರ ರಾಜ್ಯಗಳಲ್ಲಿ ವಾಸಿಸುತ್ತಿರುವ ಸಿಖರ ಮೇಲೆ ಅಂಥ ಘೋಷಣೆಗಳ ಪರಿಣಾಮವೇನಾಗುತ್ತದೆಂಬುದನ್ನು ಸಿಖ್ ಮುಖಂಡತ್ವ ತಿಳಿದುಕೊಂಡಂತೆ ಕಂಡುಬರುವುದಿಲ್ಲ. ಅವರಲ್ಲಿ ಬಹುಸಂಖ್ಯಾತರು, ಭೂಮಿಯ ಒಡೆತನವಿರುವ ರೈತರು, ವ್ಯಾಪಾರಸ್ಥರು ಮತ್ತು ವಾಹನ ನಡೆಸುವವರಾಗಿದ್ದಾರೆ. ಅವರೆಲ್ಲ ಒಳ್ಳೆ ಸ್ಥಿತಿವಂತರಾಗಿದ್ದಾರೆ. ಒಂದು ರಾಜ್ಯದಲ್ಲಿ ತಮ್ಮ ಜಾತಿಯ ಪ್ರಭುತ್ವವನ್ನು ಸ್ಥಾಪಿಸಲು ಶಿಖ ಮುಖಂಡರು ಇಚ್ಛಿಪಟ್ಟಿದ್ದಾದರೆ ಬೇರೆ ರಾಜ್ಯಗಳಲ್ಲಿ ತಮ್ಮ ಜಾತಿಯವರ ಪರಿಸ್ಥಿತಿ ಏನಾದೀತು? ನಮ್ಮ ದೇಶದ ಯಾವುದೇ ಭಾಗವೊಂದರಲ್ಲಿ ಒಂದು ಧರ್ಮದ ಆಧಾರದ ಮೇಲೆ ಆಧಿಪತ್ಯ ಸ್ಥಾಪನೆಯಾದರೆ ಅದು ದೇಶದ ಐಕ್ಯತೆಗೆ ಅಪಾಯಕಾರಿಯಾಗುತ್ತದೆ.

ಆಂದೋಲನ ಉಗ್ರಗಾಮಿಗಳ ಕೈ ಸೇರಲು ಮತ್ತು ಆಂದೋಲನದ ಮೇಲೆ ಅಕಾಲಿ ಧುರಿಣತ್ವ ನಿಯಂತ್ರಣ ಕಳೆದುಕೊಂಡು ಅವಮಾನಿತ ಸ್ಥಿತಿಯಲ್ಲಿರಲು ಕಾರಣ ಈ ಘೋಷಣೆಗಳೇ. ಒಂದು ವೇಳೆ ಅಕಾಲಿ ಧುರಿಣತ್ವವು ಉಗ್ರವಾದಿಗಳಿಂದ ತನ್ನನ್ನು ತಾನೇ ಸಂಪೂರ್ಣವಾಗಿ ಪ್ರತ್ಯೇಕಿಸಿಕೊಂಡು ವಿರೋಧಪಕ್ಷಗಳೊಂದಿಗೆ ಹೆಜ್ಜೆ ಹಾಕಿದ್ದರೆ ಪರಿಸ್ಥಿತಿ ಭಿನ್ನವಾಗಿರಬಹುದು. ಈ ದುರಂತಕರ ಘಟನೆಗಳಿಂದ ಅದು ಪಾಠ ಕಲಿಯಬೇಕಿದೆ.

ಭಯೋತ್ಪಾದಕರು ಇನ್ನೂ ಚುರುಕಾಗಿರುವದಲ್ಲದೆ ಅಕಾಲಿ ಧುರೀಣರು ತಮ್ಮ ಆಂದೋಲನವನ್ನು ವಂಚಿಸಿದರೆಂದು ವದಂತಿ ಹರಡುತ್ತಿದ್ದಾರೆ. ಇಂಥ ವದಂತಿಯ ಮುಸುಕಿನೊಳಗೆ ತಮ್ಮೆಲ್ಲ ದುರುದ್ದೇಶ ಪೂರಿತ ಯೋಜನೆ ಮತ್ತು ಕೃತ್ಯಗಳನ್ನು ಮುಚ್ಚಿಹಾಕುವುದು ಅವರ ಉದ್ದೇಶ. ರಾಷ್ಟ್ರೀಯ ದೃಷ್ಟಿಕೋನವನ್ನು ತನ್ನಲ್ಲಿ ಅಳವಡಿಸಿಕೊಂಡಿರುವ ಅನುಭವ ಅಕಾಲಿ ಧುರಿಣತ್ವ ಒಮ್ಮೆ ತನ್ನ ಪ್ರತಿಷ್ಠೆ ಕುಗ್ಗಿ ನಿಯಂತ್ರಣ ತಪ್ಪಿಸಿಕೊಂಡರೆ ಶೂನ್ಯವೊಂದು ಸೃಷ್ಟಿಯಾಗಿ ಆ ಶೂನ್ಯದಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಹಸನಾದ ನೆಲವೊಂದು ಸಿದ್ಧವಾಗುವಂಥ ಸ್ಥಿತಿ ಉದ್ಭವಿಸುತ್ತದೆ. ಅಕಾಲಿ ಧುರಿಣರು ಧೈರ್ಯಗುಂದದೆ ಸಿಖ್ ಜನತೆಯ ಅಭ್ಯುದಯವು ಪಂಜಾಬಿನಲ್ಲಿ ವಾಸಿಸುತ್ತಿರುವ ಹಿಂದೂ ಮತ್ತಿತರ ಜನವರ್ಗಗಳ ಅಭ್ಯುದಯ ಮತ್ತು ಒಟ್ಟಾರೆ ದೇಶದ ಅಭ್ಯುದಯದಿಂದ ಪ್ರತ್ಯೇಕವಲ್ಲವೆಂಬ ಸತ್ಯವನ್ನು ಮನಗಾಣಬೇಕು. ಶ್ರೀನಗರದಲ್ಲಿ ಅವರ ಬೆಂಬಲಿಗರೊಂದಿಗೆ ಸೇರಿಕೊಂಡು ಭಾರತ ವಿರೋಧಿ ಘೋಷಣೆ ಕೂಗಿದವರು ಅವರ ಮಿತ್ರರಲ್ಲ. ಅವರು ಸಾಮ್ರಾಜ್ಯಶಾಹಿ ಶಕ್ತಿಗಳ ಹಸ್ತಕರು ಪ್ರಬಲ ನೆಲೆ ಹೊಂದಿದ ಅಕಾಲಿಗಳು ಉಗ್ರಗಾಮಿಗಳಿಂದ ದಾರಿ ತಪ್ಪಿಸಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬಾರದು.

ಪರಂಪರೆಯನ್ನು ಮುರಿಯುವುದು

ತಾವು ಅಭಿಮಾನ ಪಡುತ್ತಿರುವ ಪರಂಪರೆಯನ್ನು ಅಕಾಲಿ ಮುಖಂಡರು ನೋಡಿದರೂ ಕೂಡ, ದೇಶದ ಸ್ವಾತಂತ್ರ್ಯದ ಸಲುವಾಗಿ ತಮ್ಮ ಜೀವವನ್ನೇ ತೆತ್ತವರೆಲ್ಲ. ಸಾಮ್ರಾಜ್ಯಶಾಹಿಯ ವಿರುದ್ಧ ಐಕ್ಯತೆ ಸಾಧಿಸುವ ಕಾರ್ಯದಲ್ಲಿ ಮುಂದಳದಲ್ಲಿದ್ದಾರೆ ಮತ್ತು ತಮ್ಮ ಜೀವನವಿಡೀ ಜಾತೀಯ ಸೌಹಾರ್ದತೆ ಕಾಪಾಡಲು ದುಡಿಯುತ್ತಿದ್ದಾರೆ. ಅವರಲ್ಲಿಯ ಕೆಲವರು ಗಲ್ಲಿಗೇರಿಸಲ್ಪಡುವುದರಿಂದ ಪಾರಾಗಿದ್ದವರೂ ಮತ್ತು ತಮ್ಮ ಜೀವನದ ಉತ್ತಮ ಸಮಯವನ್ನು ಜೈಲಿನಲ್ಲಿ ಕಳೆದವರು, ತಮ್ಮ ಬಿಡುಗಡೆಯಾದ ನಂತರ ತಮ್ಮ ಜೀವನವನ್ನು ದಲಿತರ ಸಂಘಟನೆಗೆ ಮೀಸಲಾಗಿಟ್ಟಿದ್ದರು. ಅವರೆಲ್ಲ ಗದಾರ್ ಪ್ರತಿಭಾವಂತರಿರಲಿ, ಬಾಬರ ಅಕಾಲೀಸೇ ಇರಲಿ, ಭಗತ್ ಸಿಂಗ್‌ನ ಸಂಗಾತಿಗಳೇ ಇರಲಿ ಹೆಚ್ಚಿನವರೆಲ್ಲ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರಿದ್ದರು. 1947 ರ ಜಾತೀಯ ದಂಗೆಯ ಕಾಲದಲ್ಲಿ ಕೂಡ ಅವರು ಜಾತೀಯ ಸೌಹಾರ್ದತೆಯ ಮತ್ತು ಜಾತ್ಯಾತೀತತೆಯ ಘೋಷಣೆಯನ್ನು ಎತ್ತಿ ಹಿಡಿದಿದ್ದರು. ಅವರ ಪರಂಪರೆಯ ಕುರಿತಷ್ಟೇ ಮಾತಾಡಿ, ಅವನ್ನು ಅನುಕರಣೆಯಲ್ಲಿ ತರದಿದ್ದರೆ ಅವರಿಗೆಲ್ಲ ಬಹಳ ಅನ್ಯಾಯ ಮಾಡಿದಂತಾಗುತ್ತದೆ.

ಇದು ಉಪದೇಶ ಕೊಡುತ್ತ ಕೂಡುವ ಕಾಲವಲ್ಲ. ಸ್ವರ್ಣಮಂದಿರದಲ್ಲಿ ಸೈನ್ಯ ಪ್ರವೇಶದ ಪರಿಣಾಮವಾಗಿ ನೊಂದುಕೊಂಡ ಭಾವನೆಗಳ ಸಿಖ್ ಹೃದಯಗಳನ್ನು ಸಂತೈಸಬೇಕಾದ ಕಾಲ.

ಇಂಥಾ ಪರಿಸ್ಥಿತಿ ಉಂಟಾಗಲಿಕ್ಕೆ, ಒಂದು ಕಡೆ ತೀವ್ರಗಾಮಿಗಳಾದರೆ, ಮತ್ತೊಂದು ಕಡೆ ಇನ್ನು ಅಸಮರ್ಪಕ ಹಿಂಜರಿತದ ಧೋರಣೆಯನ್ನು ಅನುಸರಿಸುತ್ತಿರುವ, ವಿರೋಧ ಪಕ್ಷಗಳ ಸಲಹೆಗಳನ್ನು ಸ್ವೀಕಾರ ಮಾಡದ ಕೇಂದ್ರ ಸರಕಾರವೇ ಕಾರಣವಾಗಿದೆ.

ಗಂಭೀರ ಪರಿಸ್ಥಿತಿ

ಸ್ವರ್ಣಮಂದಿರದ ಪರಿಸರದಿಂದ ಮತ್ತು ಇತರ ರಹಸ್ಯ ನೆಲೆಗಳಿಂದ ಭಯೋತ್ಪಾದಕರನ್ನು ಹೊರಗೆಳೆಯಲಾಗಿದೆ ಎನ್ನಬಹುದಾದರೂ ಧಾರ್ಮಿಕ ಭಾವನೆಗಳ ಉದ್ದೀಪನೆಯಿಂದಾಗಿ ಭಯೋತ್ಪಾದಕತೆಯ ಸೈದ್ಧಾಂತಿಕ ತಳಹದಿ ವಿಸ್ತಾರಗೊಂಡಿದೆ. ಪಂಜಾಬ್‌ನಲ್ಲಿಂದು ಮತೀಯ ವಿಭಾಜಕತೆಯಿರುವುದಷ್ಟೇ ಅಲ್ಲದೆ ಹಿಂದೂಸಿಖ್ ಉದ್ವಿಗ್ನತೆಯನ್ನಾಧರಿಸಿದ ಮತೀಯ ಭಾವನೆಗಳು ಇರುವುದಷ್ಟೇ ಅಲ್ಲದೆ, ರಾಜ್ಯಪ್ರಭುತ್ವದಿಂದ ಸಿಖ್ ಜನತೆ ಅವಮಾನಿಸಲ್ಪಟ್ಟಿದೆಯೆಂಬ ಅಪಾಯಕಾರಿ ಭಾವನೆಯೂ ಸಿಖ್ ಜನರ ಮನಸ್ಸಿನಾಳದಲ್ಲಿ ಇಳಿಯುತ್ತಿದೆ.

ಪಂಜಾಬ್ ಹಾಗೂ ಪಂಜಾಬಿನಿಂದ ಹೊರಗೆ ಹಿಂದೂ ಮತೀಯವಾದಿಗಳು ಆಡುತ್ತಿರುವ ಪಾತ್ರ ಗಾಯದ ಮೇಲೆ ಬರೆ ಎಳೆಯುತ್ತಿದೆ. ರಾಜ್ಯದ ಎಲ್ಲ ಊರು—ಪಟ್ಟಣಗಳಲ್ಲಿ ಪ್ರತಿಬಂಧ ಕಾಜ್ಞೆ ಇರುವದರಿಂದ ರಾಜಕೀಯ ಪಕ್ಷಗಳಿಗೆ ಪಾರ್ಶ್ವವಾಯು ಹಿಡಿದಂತಾಗಿದೆ. ಸುದ್ದಿಗಳ ಪ್ರಕಟಣೆಯ ಮೇಲಿರುವ ಸಂಪೂರ್ಣ ಸೆನ್ಸಾರ್‌ನಿಂದಾಗಿ ಒಂದೋ ಜನತೆ ಬಿ.ಬಿ.ಸಿ. ಮತ್ತು ವ್ಯಾಸ್ ಆಪ್ ಅಮೇರಿಕದಿಂದ ಸಾಮ್ರಾಜ್ಯ ಶಾಹಿಗಳು ಮಾಡುವ ಅಪಪ್ರಚಾರವನ್ನು ನಂಬುವ ಇಲ್ಲವೆ ಎಲ್ಲ ಬಗೆಯ ಮತೀಯವಾದಿ ಉಗ್ರವಾದಿಗಳು ಹರಡುತ್ತಿರುವ ವದಂತಿಗಳನ್ನವಲಂಬಿಸುವಂಥ ಪರಿಸ್ಥಿತಿ ಉಂಟಾಗಿದೆ.

ಈ ಸಂದರ್ಭವನ್ನರಿತು ಕೊಂಡು ಇಂಥದೊಂದು ಪರಿಸ್ಥಿತಿಯಲ್ಲಿ ಸಕ್ರಿಯವಾಗಿ ಮಧ್ಯೆ ಪ್ರವೇಶಿಸಿ ಮತೀಯವಾದ ಮತ್ತು ಪ್ರತ್ಯೇಕತಾವಾದದ ವಿಷಕ್ರಿಮಿಗಳು ಹರಡದಂತೆ ನೋಡಿಕೊಳ್ಳುವುದು ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಮನೋಭಾವನೆಯ ನಾಗರಿಕರೆಲ್ಲರ ಕರ್ತವ್ಯವಾಗಿದೆ.

ರಾಜ್ಯದ ನಿಜವಾದ ಪರಂಪರೆಗನುಸಾರವಾಗಿ ತಮ್ಮ ಕಣ್ಣಿನ ಗೊಂಬೆಯಂತೆ ಅವರು ಪಂಜಾಬ ಜನತೆಯ ಐಕ್ಯತೆಯನ್ನು ಕಾಪಾಡಬೇಕಾಗಿದೆ. ಒಂದು ಜಾತಿಯನ್ನು ಮತ್ತೊಂದು ಜಾತಿಯ ವಿರುದ್ಧ, ಒಂದು ರಾಜ್ಯವನ್ನು ಮತ್ತೊಂದು ರಾಜ್ಯದ ವಿರುದ್ಧ ಎತ್ತಿಕಟ್ಟುವ ಸರಕಾರದ ನೀತಿಯನ್ನು ವಿರೋಧಿಸಬೇಕು; ಹಾಗೆಯೇ ಪಂಜಾಬಿಗಳ ನಿಜವಾದ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆಯೂ, ಸಿಖ್ಖರ ಮನಸ್ಸಿಗಾದ ನೋವನ್ನು ಶಮನಗೊಳಿಸುವ ಎಲ್ಲ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಭಾರತ ಕಮ್ಯುನಿಸ್ಟ್ ಪಾರ್ಟಿ ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಪರಿಸ್ಥಿತಿ ಇದೇ ರೀತಿ ಮುಂದುವರಿಯಲು ಬಿಟ್ಟರೆ ಅದು ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಬಹುದಾಗಿದೆ.

(ಮುಗಿಯಿತು)

ಮಾಸ್ತಿಯವರ ಸಾಹಿತ್ಯ ಮತ್ತು ಅವರ ಕೃತಿ ಚಿಕ್ಕವೀರರಾಜೇಂದ್ರ

1983 ರ ಜ್ಞಾನಪೀಠ ಪ್ರಶಸ್ತಿ ಕನ್ನಡದ ಹಿರಿಯ ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರವರ ಐತಿಹಾಸಿಕ ಕಾದಂಬರಿ ಚಿಕ್ಕವೀರರಾಜೇಂದ್ರಕ್ಕೆ ಸಂದಿದೆ. ಕನ್ನಡ ಸಾಹಿತ್ಯ ಕೃತಿಗಳಿಗೆ ಸಂದ ನಾಲ್ಕನೆಯ ಪ್ರಶಸ್ತಿಯಿದು. ಭಾರತೀಯ ಭಾಷೆಗಳಲ್ಲಿ ಹಿಂದಿಗಷ್ಟೆ ಇಲ್ಲಿಯವರೆಗೂ ನಾಲ್ಕು ಪ್ರಶಸ್ತಿಗಳು ಸಂದಿವೆ. ಜ್ಞಾನ ಪೀಠ ಪ್ರಶಸ್ತಿಯ ಆಯ್ಕೆ ವಿಧಾನವನ್ನು ಕಟು ಟೀಕೆಗೆ ಗುರಿಪಡಿಸಿದ ಮಾಸ್ತಿಯವರ ಮಾತಿನಲ್ಲಿಯೇ ಹೇಳುವುದಾದರೆ "ಮಳೆ ಹೊತ್ತ ಮೋಡ ಎಲ್ಲಾದರು ಒಂದು ಕಡೆ ಸುರಿಸಲೇಬೇಕಾದ ಮಳೆ ನಮ್ಮ ನೆಲಕ್ಕೆ ಬಂದಿತಲ್ಲ. ಎಂಬುದಷ್ಟೇ ಸಂತೋಷದ ಸಮಾಚಾರ."

ನವೋದಯದ ಮುಂಬೆಳಗಿನ ಸಾಹಿತಿಗಳು

"ಶ್ರೀನಿವಾಸ" ಎಂಬ ಕಾವ್ಯನಾಮದಿಂದ ಬರೆದ ಮಾಸ್ತಿಯವರು ಕನ್ನಡ ನವೋದಯದ ಮುಂಬೆಳಗಿನ ಸಾಹಿತಿಗಳು. ಅವರ ಸಾಹಿತ್ಯದಲ್ಲೆಲ್ಲಾ ಈ ಕಾಲಘಟ್ಟದ ಸಂಕ್ರಮಣ ಸ್ಥಿತಿಯ ಪ್ರಭಾವ ಅಚ್ಚೊತ್ತಿದೆ.

9 ನೆಯ ಶತಮಾನದಿಂದ ಇಂದಿನವರೆಗಿನ ಕನ್ನಡ ಸಾಹಿತ್ಯದ ಸಮೃದ್ಧ ಇತಿಹಾಸದಲ್ಲಿ ನವೋದಯ ಸಾಹಿತ್ಯ ಮಾರ್ಗ ಅತ್ಯಂತ ಪ್ರಮುಖ ಘಟ್ಟ. ನವೋದಯ ಕಾಲಘಟ್ಟದಲ್ಲಿ ಕೂಡ ಅನೇಕ ಹಂತಗಳು–ಹಂತದಿಂದ ಹಂತಕ್ಕೆ ಬೆಳೆಯುತ್ತಾ ಹೋದ ನವೋದಯ ಸಾಹಿತ್ಯ ಮುಂದೆ ಸ್ವಾತಂತ್ರ್ಯದ ಕಹಳೆಯಾಯಿತು.

ದೀನ ದಲಿತರ ಬದುಕನ್ನು ತನ್ನ ಕ್ರೂರ ಹಿಡಿತದಿಂದ ನಲುಗಿಸಿದ ಪಾಳೆಯಗಾರಿ ಸಮಾಜದ ಬಸಿರೊಡೆದು ಬರುತ್ತಿದ್ದ ಪ್ರಗತಿ ಪರ ವಿಚಾರಗಳು ಭಾರತವನ್ನೆಲ್ಲಾ ವ್ಯಾಪಿಸಿದ್ದ ಕಾಲ ಅದು. ವಂಗಭಂಗ ಚಳುವಳಿಯಿಂದ ಆರಂಭವಾಗಿ ಪರದೇಶಿ ನೊಗವನ್ನು ಕಿತ್ತೆಸೆಯುವ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ವಿಚಾರಗಳು; ಅದರ ಜೊತೆ ಜೊತೆಯಲ್ಲಿಯೇ ಆರಂಭವಾದ ಭಾಷಾ ಜನಾಂಗಗಳ ಐಕ್ಯತೆ ಕನ್ನಡದ ಸಂದರ್ಭದಲ್ಲಿ – ಕರ್ನಾಟಕದ ಏಕೀಕರಣದ ಬೇಡಿಕೆಗಳು ಮೊಳೆಯುತ್ತಿದ್ದ ಕಾಲ. ಭಾರತೀಯ ಬಂಡವಾಳಶಾಹಿ ವರ್ಗ ತನ್ನ ಮುಂದಿನ ಬೆಳವಣಿಗೆಗೆ ಬ್ರಿಟೀಷರಿಂದ ಒದಗುತ್ತಿದ್ದ ಅಡ್ಡಿಯನ್ನು ಆಗ ತಾನೆ ತಿಳಿದುಕೊಂಡು ಇಡೀ ಜನಸಮುದಾಯವನ್ನು ಹೋರಾಟಕ್ಕಿಳಿಸಲು ಪ್ರಯತ್ನಿಸುತ್ತಿದ್ದ ಕಾಲ

ಅದೇ ಸಮಯದಲ್ಲಿಯೇ ಈ ಭಾವನೆಗಳು ಇನ್ನೂ ರೂಪಗೊಳ್ಳುವ ಹಂತದಲ್ಲಿದ್ದುವೆಂಬುದನ್ನು ಪಾಳೆಯಗಾರಿ ಮೌಲ್ಯಗಳು ಈಗ ಕೂಡ ಪೂರ್ಣವಾಗಿ ನಾಶವಾಗಿಲ್ಲದ ಸಮಯದಲ್ಲಿ ಪ್ರಭಾವಶಾಲಿಯಾಗಿದ್ದವೆಂಬುದನ್ನು ಮರೆಯಬಾರದು. ಮಾಸ್ತಿಯವರು ಬರೆಯಲಾರಂಭಿಸಿದ 20 ನೆಯ ಶತಮಾನದ ಎರಡನೆಯ ದಶಕದ ಪರಿಸರ ಇದು.

ಮುಂದಿನ ಹಂತದ ಸಾಹಿತಿಗಳು ನವೋದಯದ ಮುಂಬೆಳಗಿನ ಕಾಲದಲ್ಲಿ ಬಿ. ಎಂ. ಶ್ರೀ; ಮಾಸ್ತಿ ಮೊದಲಾದ ಅನೇಕ ರಾಜಸೇವಾಸಕ್ತರ ಸಂಕೋಚಗಳಿಂದ ಬಿಡಿಸಿಕೊಂಡು ಹಳೆಯ ಮೈಸೂರು ರಾಜ್ಯವಿರಲಿ, ಬ್ರಿಟೀಶರೇ ನೇರವಾಗಿ ಆಳುತ್ತಿದ್ದ ಪ್ರದೇಶಗಳಿರಲಿ ಆಳುವ ಮಹಾಸ್ವಾಮಿಗಳ ಅಥವ ಬ್ರಿಟೀಷ್ ಅಧಿಕಾರಿಗಳ ಪ್ರಭಾವಲಯದಿಂದ ಬಿಡಿಸಿಕೊಂಡು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಲು ತರೆಯುತ್ತರು. ಸ್ವಾತಂತ್ರ್ಯ ಹೋರಾಟದಲ್ಲಿ ಕೂಡ ಕೆಲವರು ಭಾಗಿಯಾದರು. ಇಲ್ಲಿಯವರೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಕುವೆಂಪು, ಬೇಂದ್ರೆ, ಶಿವರಾಮ ಕಾರಂತರು ನವೋದಯ ಸಾಹಿತ್ಯದ ನಡು ನೆತ್ತಿಯಾದ ಈ ಹಂತಕ್ಕೆ ಸೇರಿದವರು.

ಮಾಸ್ತಿಯವರು ಬೆಳೆದ, ಸಾಹಿತ್ಯ ರಚಿಸಿದ ಕಾಲದ ಈ ಹಿನ್ನೆಲೆ ಮಾಸ್ತಿಯವರ ಸಾಹಿತ್ಯದ ಮೌಲ್ಯಗಳನ್ನು ಗುರುತಿಸಲು, ಅವರ ವಿಚಾರಗಳ ನೆಲೆಯನ್ನು ನವೋದಯ ಕಾಲದ ಇತರರನ್ನು ಅರಿಯಲು ಅವಶ್ಯಕ. ಯಾವ ಸಾಹಿತಿಯೇ ಆಗಲಿ ತನ್ನ ಕಾಲದ ಕೂಸಲ್ಲವೆ ?

ಏಕೀಕರಣ

ಕನ್ನಡದ ನವೋದಯದ ಸಾಹಿತಿಗಳಲ್ಲಿ ಬಹಳ ಜನ ಕರ್ನಾಟಕದ ಏಕೀಕರಣದ ಪರವಾಗಿದ್ದರು. ಆದರೆ ಆರಂಭ ಕಾಲದಲ್ಲಿ ಮಾಸ್ತಿಯವರು ಅವರ ಸಮಕಾಲೀನರು ಏಕೀಕರಣವನ್ನು ಒಂದು ವ್ರತವನ್ನಾಗಿ ಭಾವಿಸಿ ಇಡೀ ಕರ್ನಾಟಕದಲ್ಲಿ ಪ್ರಸಾರ ಮಾಡಿದರು. ಮಾಸ್ತಿಯವರು ಕೂಡ ಹರಿದು ಹಂಚಿ ಹೋಗಿದ್ದ ಕರ್ನಾಟಕದಲ್ಲಿ ಪ್ರಬುದ್ಧ ಸ್ಥಿತಿಗೆ ಬರುತ್ತಿದ್ದ ಬಂಡವಾಳಶಾಹಿ ವರ್ಗದ ಕನ್ನಡ ಭಾಷಾ ಸಂಪರ್ಕ ಸಾಧನವಾಗಿ ಕನ್ನಡ ಮಾತಾಡುವರೆಲ್ಲರಿಗೆ ತಾವು ಉತ್ಪಾದಿಸಿದ ವಸ್ತುಗಳು ಮಾರಾಟವಾಗಬೇಕು, ಕರ್ನಾಟಕವೆಂಬ ಮಾರುಕಟ್ಟೆಯ ಮೇಲಿನ ಸ್ವಾಮ್ಯ ನಮ್ಮದಾಗಬೇಕು. ಬಾಂಬೆಯ, ಮದರಾಸಿನ ಬಂಡವಾಳಶಾಹಿ ನಮ್ಮ ಬೆಳವಣಿಗೆಗೆ ಅತಂಕವೊಡ್ಡುವುದನ್ನು ತಪ್ಪಿಸಬೇಕು, ಮಧ್ಯೆ ಮಧ್ಯೆ ಬರುವ ಪ್ರಾಂತಗಳ ಗಡಿಗೆರೆಗಳು ವಿವಿಧ ಸುಂಕನಿಯಮಗಳು ನಮ್ಮ ವ್ಯಾಪಾರ ವಹಿವಾಟುಗಳಿಗೆ, ಲಾಭಾಂಶಗಳಿಗೆ ಅಡ್ಡಿಯಾಗಬಾರದು ಎಂಬ ಬೇಡಿಕೆಗಳಿಗೆ—

ನಾವೆಲ್ಲ ಒಂದೇ ಮನೆಯವರಣ್ಣ ತಮ್ಮಂದಿರು ।
ಒಂದನ್ನು ಪಡೆದುದೊಂದೆ ನಾಡಿನ ಬಸಿರು ।
ಎಂದು ನಾವರಿದವೆ ನಮಗೆ ಇನ್ನಾರಿದುರು ।
ಹಾ ನನ್ನ ಸೋದರರೆ ಬನ್ನಿ ಒಂದಾಗಿ ।
ಜಯ ವಧುವ ನಿಮ್ಮ ತೋಳ ನೋಲಟ್ಟು ತೂಗಿ ।

ಎಂಬ ಭಾವನಾಮಯ ರೂಪವನ್ನಿತ್ತು ಕರ್ನಾಟಕದ ಸಾಮಾನ್ಯ ಜನತೆಯನ್ನು ಸೆಳೆದರು. ಈ ಕಾರ್ಯದಲ್ಲಿ ಮಾಸ್ತಿಯವರ ಪಾಲು ಕಡಿಮೆಯದಲ್ಲ. ಈ ವಿಷಯದಲ್ಲಿ ಮೈಸೂರಿನ ಪಾಳೆಯಗಾರಿ ಆಡಳಿತದ ಅಧಿಕಾರಿ ಎಂಬುದನ್ನು ಬದಿಗಿರಿಸಿ ಭಾಷಣ ಮಾಡಿದರು. ಲೇಖನಗಳನ್ನು ಬರೆದರು. ಕನ್ನಡ ಬಂಡವಾಳಶಾಹೀ "ಜೊತೆಯವರ ಕೂಟದಲ್ಲಿ ನಾವು ಸಮನಿಮಗೆಂದು ನುಡಿವ ಬಲವಿಲ್ಲ.... ಮಿಕ್ಕವರು ನೂಕಿದಾಕಡೆ ಬಿದ್ದು ಯಾವ ಮಂಕೋ ಕವಿದು ಹುದುಗಿರುವುದೆಲ್ಲ" ಎಂದು ಹಳಹಳಿಸಿದರು. ಕನ್ನಡಿಗರಿಗೆಂದು ಹೇಳಿದ ಈ ಮಾತು ರಾಜ್ಯದ ಬಂಡವಾಳಶಾಹೀ ಬೆಳವಣಿಗೆಯ ಪರಿಸ್ಥಿತಿಯನ್ನು ಕುರಿತು ಹಾಡಿದ್ದು ಎಂಬುದನ್ನು ಗಮನಿಸಬೇಕು.

— ಜಿ. ಎನ್. ನಾಗರಾಜ್

ಹೀಗೆ ಕಾವ್ಯದಲ್ಲಿ, ಭಾಷಣಗಳಲ್ಲಿ ಕನ್ನಡ ನಾಡು ನುಡಿಯ ಪ್ರೇಮವನ್ನು ಜನತೆಯಲ್ಲಿ ಮೂಡಿಸಲು ಹೆಣಗಿದರು ಈ ದಿಸೆಯಲ್ಲಿ ಆಡಳಿತದಲ್ಲಿ ಶಿಕ್ಷಣದಲ್ಲಿ ಕನ್ನಡ ಭಾಷೆಯ ಬಳಕೆಯನ್ನು ಪ್ರತಿಪಾದಿಸುವುದರಲ್ಲಿ ತಮ್ಮ ಸಮಕಾಲೀನರಿಗಿಂತ ಮುಂದೆ ಹೋದರು. ಕನ್ನಡದಲ್ಲಿ ಪಾಳೆಯಗಾರಿ ಸಂಕೋಲೆಗಳಿಂದ ಕಳಚಲು ಪ್ರಯತ್ನ ಪಡುತ್ತಿದ್ದ ಪ್ರಗತಿಪರ ಹಂತದ ಬಂಡವಾಳಶಾಹಿಯ ಮುಖವಾಣಿ ಯಾದರು.

ಸಾಮೂಹಿಕ ಚಳುವಳಿ ಎಡಶಕ್ತಿಗಳ ಬಗ್ಗೆ ಅಸಹನೆ

ಅವರ ಪ್ರಗತಿಪರ ಬಂಡವಾಳಶಾಹಿ ಮನೋಧರ್ಮ ದುಡಿಯುವ ಜನರ ಮಾತು ಬಂದಾಗ ಹೇಗೆ ಬಂಡವಾಳಶಾಹಿ ಹಿತರಕ್ಷಣೆಯ ಬಗ್ಗೆ ಜಾಗೃತವಾಗುತ್ತದೆ ಎಂಬುದು ಕುತೂಹಲಕಾರಿ ಮೈಸೂರು ಸಂಸ್ಥಾನದ ಮೊತ್ತ ಮೊದಲ ಕಾರ್ಮಿಕ ಕಮಿಷನರ್ ಆಗಿದ್ದವರವರು ಸಂಸ್ಥಾನದ ಕಾರ್ಮಿಕ ಕಾಯಿದೆಗೆ ರೂಪುಕೊಟ್ಟವರು ಕಾರ್ಮಿಕ ಚಳುವಳಿ ಬಗ್ಗೆ ಅವರ ಅಭಿಪ್ರಾಯನೋಡಿ: "ಪಶ್ಚಿಮ ದೇಶಗಳಿಂದ ಬಂದ ಉದ್ಯಮಗಳು ಒಂದು ರೂಪಕ್ಕೆ ಬರುವ ಮೊದಲೇ ಅಲ್ಲಿಯ ಸ್ಟ್ರೈಕ್ ಕ್ರಮ ಇಲ್ಲಿ ರೂಪುಗೊಂಡು ನಮ್ಮ ಉದ್ಯೋಗ ಬೆಳೆಯದಂತೆ ಮಾಡಿದೆ ಎಂದು ನನಗೆ ಕಂಡಿತು .... INDUSTRYಗೂ ಮೊದಲು STRIKE ಪ್ರಾರಂಭವಾದದ್ದು ನಮ್ಮ ದುರ್ದೈವ" "Cheif ConcilationOffi-cer ಆಗಿಯೂ (Labour Commissioner ಹುದ್ದೆ ನಿರ್ಮಾಣವಾಗುವ ಮೊದಲು) ನಾನು ಇಂಥದೇ ಹೊಟ್ಟನ್ನು ಕುಟ್ಟುವ ಕೆಲಸ ಮಾಡಿದ್ದಾಯಿತು)

(ಅವರ ಆತ್ಮಕಥೆ ಭಾಗ –3)

ಇನ್ನು ಜನತೆಯ, ವಿದ್ಯಾರ್ಥಿಗಳ ಸಾಮೂಹಿಕ ಚಳುವಳಿಗಳ ಬಗ್ಗೆ ಅವರು ಅನೇಕ ಬಾರಿ ವ್ಯಕ್ತಪಡಿಸಿರುವ ಅಭಿಪ್ರಾಯ.

"ಆಂಗ್ಲ ಪ್ರಭುವಾಗಿದ್ದ ಕಾಲದಲ್ಲಿ ಸತ್ಯಾಗ್ರಹ ಒಂದು ಯುಕ್ತ ಆಯುಧವಾಗಿತ್ತು. ನಮ್ಮ ರಾಷ್ಟ್ರವನ್ನು ನಾವೇ ಆಳಿಕೊಳ್ಳುವ ಕಾಲದಲ್ಲಿ ಸತ್ಯಾಗ್ರಹ ಒಂದು ಕ್ರಮ ಅಲ್ಲ."

ನಾವು ಒಂದು ಬಡ ಜನಾಂಗ ಈಗ ತಾನೇ ಸ್ವತಂತ್ರರಾಗಿದ್ದೇವೆ. ನಮ್ಮಲ್ಲಿ ಎಲ್ಲರೂ ತಮ್ಮಿಂದ ಆದಷ್ಟು ಚೆನ್ನಾಗಿ ಸಂಗತಿಯನ್ನು ಕಲಿತುಕೊಂಡು ಕೆಲಸದಲ್ಲಿ ತೊಡಗಿ ನಮ್ಮ ಅನ್ನ ಗಳಿಸುವುದರೊಂದಿಗೆ ದೇಶದ ಸ್ಥಿತಿಯನ್ನು ಉತ್ತಮಗೊಳಿಸಬೇಕು ಹಿಗಿರುತ್ತ ಎಷ್ಟೆ ಒಳ್ಳೆಯದಾಗಲಿ ಈ ಕಾರಣ ಆ ಕಾರಣಕ್ಕಾಗಿ ನಮ್ಮಲ್ಲಿ ಯಾರಾದರಾಗಲಿ Strike ಮಾಡುವುದೆನ್ನುವುದು ದೇಶಕ್ಕೆ ದ್ರೋಹ."

ಈ ಅಭಿಪ್ರಾಯಗಳು, ಪ್ರಗತಿಪರತೆಯನ್ನು ಆಗಲೇ ನೀಗಿಕೊಂಡು ಬಡಜನ ಸಮುದಾಯದ ದುಡಿತವನ್ನೇ ತನ್ನ ಲಾಭವಾಗಿ ಮಾಡಿಕೊಂಡ ಬಂಡವಾಳಶಾಹಿಯ ಸಿದ್ಧಾಂತಗಳ ಪ್ರತಿಪಾದನೆಯಲ್ಲವೆ ?

ಮಾಸ್ತಿಯವರ ಸಾಹಿತ್ಯದಲ್ಲಿ ವಿಚಾರಗಳಲ್ಲಿ ಅನೇಕ ದ್ವಂದ್ವಗಳಿದ್ದರೂ ಒಬ್ಬ ಪ್ರಗತಿಪರ ಬಂಡವಾಳಶಾಹಿಯಾಗಿ ಅನೇಕ ಉತ್ತಮ ಕೃತಿಗಳನ್ನು ಕನ್ನಡ ನಾಡಿಗೆ ನೀಡಿದ್ದಾರೆ. ಸಾಹಿತ್ಯದ ಎಲ್ಲಾಪ್ರಕಾರಗಳಲ್ಲಿ ಕೈಯಾಡಿಸಿದ ಇವರ ನೈಪುಣ್ಯ ಪ್ರಕಾಶಮಾನವಾಗುವುದು ಸಣ್ಣ ಕಥೆಯಲ್ಲಿಯೆ. 13 ಕಥಾಸಂಕಲನಗಳು 17 ಕವನ ಸಂಗ್ರಹಗಳು, 14 ನಾಟಕಗಳು 18 ವಿಮರ್ಶೆ, ಉಪನ್ಯಾಸಗಳು, ಮೂರು ಸಂಪುಟಗಳ ಆತ್ಮಕಥೆ, 9 ವಿವಿಧ ಕೃತಿಗಳ ಭಾಷಾಂತರಗಳು; 9 ಇತರ ಕೃತಿಗಳನ್ನು ಬರೆದಿರುವುದಲ್ಲದೆ ಪ್ರಖ್ಯಾತವಾದ ಎರಡು ಐತಿಹಾಸಿಕ ಕಾದಂಬರಿಗಳು ಚೆನ್ನಬಸವನಾಯಕ, ಚಿಕ್ಕವೀರರಾಜೇಂದ್ರ ಇವುಗಳನ್ನೂ ರಚಿಸಿದ್ದಾರೆ.

ಇವರ ಅನೇಕ ಸಣ್ಣ ಕಥೆಗಳು, ಎರಡೂ ಕಾದಂಬರಿಗಳು, ಕೆಲವು ನಾಟಕಗಳು, ಕಥನಕವನಗಳು ಮತ್ತು ಸುನೀತಗಳು ಇವರ ಕಲಾಕುಸುರಿಗೆ ನಿದರ್ಶನವಾಗಿವೆ. ವಾಸ್ತವತೆಯನ್ನು ಪ್ರಾಮಾಣಿಕವಾಗಿ ಬಿಂಬಿಸಲು ಇವರು ಮಾಡಿರುವ ಪ್ರಯತ್ನ ಶ್ಲಾಘನೀಯವಾದುದು.

ಐತಿಹಾಸಿಕ ಕಾದಂಬರಿಗಳು

ಇತಿಹಾಸದ ಬಗ್ಗೆ ನಾವು ತಳೆಯುವ ದೃಷ್ಟಿಕೋನ, ಐತಿಹಾಸಿಕ ಮೌಲ್ಯಗಳ ನಮ್ಮ ಮನೋಧರ್ಮ, ನಮ್ಮ ಜೀವನ ದೃಷ್ಟಿ ಇವೆಲ್ಲವೂ ಯಾವುದೇ ಕಲಾಕೃತಿಯಲ್ಲಿ ಪಡಿಮೂಡುತ್ತವೆ. ಮಾನವ ತನ್ನ ಕಾಲದ ಸಮಾಜದಿಂದ ಪ್ರಭಾವಿತನಾದ ಅದೇ ಕಾಲಕ್ಕೆ ಆ ಸಮಾಜವನ್ನು ಬದಲಾಯಿಸಲು ಯತ್ನಿಸುತ್ತಿರುವ ವ್ಯಕ್ತಿ. ಇತಿಹಾಸಕಾರ ತನ್ನ ಕಾಲದ ಸಮಾಜ ಇತಿಹಾಸದ ಬಗ್ಗೆ ಕಟ್ಟಿಕೊಂಡ ಕಲ್ಪನೆಗಳು ಅವನ ಇತಿಹಾಸ ರಚನೆಯಲ್ಲಿ ಪಡಿಮೂಡುತ್ತವೆ ಎಂದು ಪ್ಲೆಖನೊವ್ ಪ್ರತಿಪಾದಿಸುತ್ತಾನೆ. ಫ್ರೆಂಚ್ ಕ್ರಾಂತಿ ಇತಿಹಾಸಕಾರರ ದೃಷ್ಟಿಯನ್ನು ಹೇಗೆ ಕ್ರಾಂತಿಕಾರಕವಾಗಿ ಬದಲಾಯಿಸಿತು ಎಂದು ಉದಾಹರಿಸುತ್ತಾನೆ. ಇತಿಹಾಸಕಾರರ ಮೇಲೆಯೆ ಈ ಪ್ರಭಾವವಿನೆಯೆಂದ ಮೇಲೆ, ಯಾವುದೇ ಕಾಲದ ಸಮಾಜವನ್ನು ತನ್ನ ಕಲ್ಪನೆಯ ಮೂಸೆಯಲ್ಲಿ ಸೃಜನಾತ್ಮಕವಾಗಿ ನಿರ್ಮಿಸಲು ಯಥೇಚ್ಚ ಅವಕಾಶವಿರುವಾಗ ಈ ಮಾತು, ಅವನ ಕಾಲದ ಸಮಾಜದ ಚಿಂತನೆ ಐತಿಹಾಸಿಕ ಕಾದಂಬರಿಕಾರನನ್ನು ಪ್ರಭಾವಿಸುವ ಮಾತು ಮತ್ತಷ್ಟು ಹೆಚ್ಚು ಸತ್ಯ.

ಕನ್ನಡದ ಐತಿಹಾಸಿಕ ಕಾದಂಬರಿಗಳನ್ನು ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. ನವೋದಯದ ಆರಂಭ ಘಟ್ಟದಿಂದ ಇಂದಿನವರೆಗೆ ಸುಮಾರು 250 ಐತಿಹಾಸಿಕ ಕಾದಂಬರಿಗಳು ರಚಿತವಾಗಿವೆ ಎಂದು ಶ್ರೀನಿವಾಸಕೊರಟಿ ಲೆಕ್ಕಿಸುತ್ತಾರೆ. ಈ ಕಾದಂಬರಿಗಳಲ್ಲಿ ರೊಮಿಲ್ಲಾ ಥಾಪರ್‌ರವರು ತಮ್ಮ "ಇತಿಹಾಸದ ಬಗ್ಗೆ ಪೂರ್ವಗ್ರಹಗಳು" ಲೇಖನಗಳಲ್ಲಿ ವಿವರಿಸಿದ ಎಲ್ಲ ರೀತಿಯ ಪೂರ್ವಗ್ರಹಗಳನ್ನೂ ಕಾಣಬಹುದು. ವಸಾಹತುಶಾಹಿ ಕಾಲದ ಹತಾಶ ಮನೋಭಾವನೆಯ ಪರಿಣಾಮವಾಗಿ, ಭಾರತದ ಚರಿತ್ರೆಯನ್ನು ಅಪಮೌಲ್ಯಗೊಳಿಸುವ ಬ್ರಿಟಿಷ್ ಚರಿತ್ರಕಾರರಿಗೆ ಪ್ರತಿಕ್ರಿಯೆಯಾಗಿ ಹಿಂದಿನದ್ದೆಲ್ಲಾ ಚಿನ್ನವೆಂಬಂತೆ ಬಂದ ಸ್ವರ್ಣ ಯುಗದ ಕಲ್ಪನೆಗಳು ಚಾರಿ

(6ನೇ ಪುಟ ನೋಡಿ)

ಮಾಸ್ತಿಯವರ ಸಾಹಿತ್ಯ.......

(7ನೇ ಪುಟದಿಂದ)

...ತ್ರಿಕ ನಾಯಕರ ವೈಭವೀಕರಣ ಉದಾತ್ತೀಕರಣಗಳು ಅವರ ಹೆಗ್ಗಳಿಕೆಗಳೇ ಈ ಕಾದಂಬರಿಗಳ ತುಂಬ ತುಂಬಿವೆ. ಇಕ್ಕೆಯ ನಾಯಕ ವರ್ಗವನ್ನು ಮಾನವ ಮಾತ್ರರನ್ನಾಗಿ ಕಾಣುವುದೇ ಸಾಧ್ಯವಿಲ್ಲ. ಇಂತಹ ಅತಿಭಾವುಕತೆಯ ನೆರಳಲ್ಲಿ ವಾಸ್ತವತೆ ಅಡಗಿಹೋಗಿದೆ. ಜಗತ್ಪ್ರಸಿದ್ಧ ಐತಿಹಾಸಿಕ ಕಾದಂಬರಿಗಳಾದ ಕೆ. ವಿ. ಅಯ್ಯರ್‌ರವರ 'ಶಾಂತಲಾ' ತರಾಸುರವರ ಚಿತ್ರದುರ್ಗದ ಇತಿಹಾಸದ ಕಾದಂಬರಿಮಾಲೆ ಕೂಡ ಹೊರತಲ್ಲ.

ಲೂಕಾಚ್ಸ್‌ರವರು ಹೇಳುವಂತೆ, "ಐತಿಹಾಸಿಕ ಕಾದಂಬರಿಯಲ್ಲಿ ಗಣನೆಗೆ ಬರುವುದು ಮಹತ್ವದ ಚಾರಿತ್ರಿಕ ಘಟನೆಗಳ ಪುನರುಕ್ತಿಯಲ್ಲ. ಚಾರಿತ್ರಿಕ ವಾಸ್ತವತೆಯಲ್ಲಿ ವ್ಯಕ್ತಿಗಳು ಯೋಚಿಸಿದ, ವರ್ತಿಸಿದ, ಅನುಭವಿಸಿದ ರೀತಿಯಲ್ಲಿಯ ಏಕೆ ನಡೆದವೆಂಬುದಕ್ಕೆ ಹಿನ್ನೆಲೆಯಾದ ಸಾಮಾಜಿಕ ಮಾನವೀಯ ಕಾರಣಗಳ ಪುನರ್‌ಸೃಷ್ಟಿ, ಚಾರಿತ್ರಿಕ ವಾಸ್ತವತೆಯ ಕಲಾತ್ಮಕ ಚಿತ್ರಣ."

ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು ಈ ವ್ಯಾಖ್ಯೆಗೆ ಪೂರ್ಣವಾಗಿ ಬದ್ಧವಾಗಿಲ್ಲದಿದ್ದರೂ, ಮೇಲೆ ವಿವರಿಸಿದ ಭಾವುಕ ದೋಷಗಳಿಗೆ ಪಕ್ಕಾಗದೆ ಉಳಿದ ಎಲ್ಲಾ ಕೃತಿಗಳಿಗಿಂತ ಭಿನ್ನವಾಗಿವೆ. ಆದುದರಿಂದಲೆ ಹೆಸರು ಗಳಿಸಿವೆ.

ಮಾಸ್ತಿಯವರು ತಮ್ಮ ಕಾದಂಬರಿಗಳಲ್ಲಿ ಪಾಳೆಯಗಾರಿಕೆಯ ವೈಭವೀಕರಣಕ್ಕೆ ಕೈಹಾಕದೆ ಪಾಳೆಯಗಾರಿಕೆಯ ಅಳಿಗಾಲದ ಚಿತ್ರಣವನ್ನು, ಪಾಳೆಯಗಾರೀ ಮನೆತನಗಳ ವಿಘಟನೆಯನ್ನು ಚಿತ್ರಿಸುತ್ತಾರೆ. ಹೀಗೆ ಚಿತ್ರಿಸುವಾಗ ವಾಸ್ತವಮಾರ್ಗದಲ್ಲಿ ನಡೆದು ಚಾರಿತ್ರಿಕ ಪ್ರಕ್ರಿಯೆಗಳ ಉತ್ತಮ ಚಿತ್ರಣವನ್ನು ನೀಡಿದ್ದಾರೆ ತಮ್ಮ ಕಲ್ಪನೆಯನ್ನು ಧಾರಾಳವಾಗಿ ದೃಷ್ಟ್ಯಾತ್ಮಕವಾಗಿ ಉಪಯೋಗಿಸಿದ್ದರೂ ಐತಿಹಾಸಿಕ ಸಂಗತಿಗಳಿಗೆ ಬಹಳ ಮಟ್ಟಿಗೆ ನಿಷ್ಠರಾಗಿದ್ದಾರೆ.

ಚಿಕ್ಕವೀರರಾಜೇಂದ್ರ

"ಚಿಕ್ಕವೀರರಾಜೇಂದ್ರ" ಕೊಡಗಿನ ಕೊನೆಯ ಅರಸು ಮನೆತನ ಅಳಿದು ಬ್ರಿಟಿಷರು ಅವರ ರಾಜ್ಯವನ್ನು ವಶಪಡಿಸಿಕೊಂಡ ಕಥೆ. 1824 ರಲ್ಲಿ ಬ್ರಿಟಿಷರು ಕೊಡಗನ್ನು ವಶಮಾಡಿಕೊಳ್ಳುವ ಮೊದಲಿನ ಒಂದು ವರ್ಷದ ಕಥೆ.

ಕೊಡಗಿನ ಕೊನೆಯ ರಾಜವೀರರಾಜನ ದುಷ್ಟ ಗುಣಗಳಿಂದ ದೌರ್ಬಲ್ಯಗಳ ಅರಮನೆ ಶಕ್ತಿಸಹಾಯಕರ, ಬೆಂಬಲವನ್ನು ಕಳೆದುಕೊಂಡು ನಿಸ್ಸಹಾಯಕನಾಗಿರುವ ವೇಳೆ ಬ್ರಿಟಿಷರು ನವರಾತ್ರಿಗೆ ಆಹ್ವಾನ ಪಡೆದು ಮಡಿಕೇರಿಗೆ ಬಂದು ತಮ್ಮ ಚದುರಂಗವನ್ನು ನಡೆಸುತ್ತಾರೆ. ರಾಜನ ಮೇಲೆ ಕೋಪವಿದ್ದ ಎಲ್ಲರನ್ನೂ ಸೆಳೆದುಕೊಳ್ಳುತ್ತಾರೆ. ವೀರರಾಜನನ್ನು ಸೆರೆಮಾಡಿ ಅವನ ಮಗಳೊಂದಿಗೆ ಇಂಗ್ಲೆಂಡಿಗೆ ಒಯ್ಯುತ್ತಾರೆ. ಇಂಗ್ಲೆಂಡಿನಲ್ಲಿ ಕ್ರೈಸ್ತ ಧರ್ಮವನ್ನು ತಂದೆಯ ಒತ್ತಾಯಕ್ಕೆ ಸ್ವೀಕರಿಸಿದ ಮಗಳು ಅಲ್ಲಿಯೇ ಒಬ್ಬನನ್ನು ಮದುವೆಯಾಗುತ್ತಾಳೆ. ಇದು ಚಿಕ್ಕವೀರರಾಜೇಂದ್ರದ ಸಂಕ್ಷಿಪ್ತ ಕಥೆ.

ಈ ಕಥೆಯನ್ನು ಹೆಚ್ಚಿನ ಭಾವೋದ್ವೇಗಗಳಿಲ್ಲದೆ ಅತಿರೇಕಗಳಿಗವಕಾಶ ಕೊಡದೆ ಚಿತ್ರಿಸಿದ್ದಾರೆ. ರಕ್ತ-ಮಾಂಸ ತುಂಬಿದ ಮಾನವ ಸಹಜ ಪಾತ್ರಗಳು ಕಥೆಯನ್ನು ರೂಪಿಸುತ್ತವೆ. ಮಾಸ್ತಿಯವರೇ ರಚಿಸಿದ ಚೆನ್ನಬಸವನಾಯಕನಿಗಿಂತಲೂ ಈ ಕೃತಿ ಮಾನವ ಪ್ರವೃತ್ತಿಯ ದರ್ಶನದಲ್ಲಿ ಒಂದು ಹೆಜ್ಜೆ ಮುಂದಿದೆ.

ಆದರೆ ಮಾಸ್ತಿಯವರ ಎರಡೂ ಕಾದಂಬರಿಗಳಲ್ಲಿಯೂ ಅಳಿಯುತ್ತಿರುವ ರಾಜಕುಲ ತನ್ನದೇ ದೋಷಗಳಿಂದ ಪರಾಕ್ರಮಣಕ್ಕೆ ತುತ್ತಾಗುತ್ತದೆ ಎಂದು ಚಿತ್ರಿಸಲ್ಪಟ್ಟಿದೆ. ಆಯಾ ಸಮಾಜದ ಒಳಗೇ ಇರುವ ಜೀವಂತ ಶಕ್ತಿಗಳ, ಪಾಳೆಯಗಾರಿ ಸಮಾಜ ವ್ಯವಸ್ಥೆ ಕುಸಿಯಲು ಕಾರಣವಾದ ಶಕ್ತಿಗಳ ಚಿತ್ರಣವಿಲ್ಲದೇ ಬದಲಾವಣೆಯ ಹಾದಿಯಲ್ಲಿರುವ ಸಮಾಜದ ಪ್ರಗತಿಪರ ಶಕ್ತಿಗಳನ್ನು ಗುರುತಿಸುವುದರಲ್ಲಿ ಸೋಲುತ್ತದೆ. ಕುಸಿಯುತ್ತಿರುವ ಸಮಾಜವನ್ನೂ ನಿಸ್ಸಹಾಯಕರಂತೆ ಇತರ ಪಾತ್ರಗಳು ನೋಡುತ್ತವೆ. ಇದರಿಂದ ಭಾರತದಲ್ಲಿ ಕುಸಿಯುತ್ತಿರುವ ಪಾಳೆಯಗಾರಿ ವ್ಯವಸ್ಥೆಗೆ ಪರಾಕ್ರಮಣವೊಂದೇ ದಾರಿ ಎಂದು ಬ್ರಿಟಿಷರ ಆಕ್ರಮಣದ, ಆಡಳಿತದ ಪರಿಣಾಮವಾಗಿ ಈ ಚಿತ್ರಣ ಮೂಡಿ ಬಂದಿದೆಯೆಂಬಂತೆ ತೋರುತ್ತದೆ.

ಒಟ್ಟಿನಲ್ಲಿ ಇತರ ಎಲ್ಲಾ ಐತಿಹಾಸಿಕ ಕಾದಂಬರಿಗಳಿಗಿಂತ ಭಿನ್ನವಾದ ಚಾರಿತ್ರಿಕ ವಾಸ್ತವವನ್ನು ನಮ್ಮ ಮುಂದಿಡುವುದರಲ್ಲಿ ಸಫಲವಾಗುತ್ತದೆ. ○

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು

(5ನೇ ಪುಟದಿಂದ)

ಫ್ಯಾಸಿಸ್ಟ್ ಬಣದ ಸೋಲಿನ ನಂತರ ಶಿಥಿಲಗೊಂಡವು. ದುರ್ಬಲಗೊಂಡ ಸಾಮ್ರಾಜ್ಯಶಾಹಿ ಚೀಣೀ ಕ್ರಾಂತಿಯ ವಿಜಯಶಾಲೀ ಮುನ್ನಡೆಯನ್ನು ಮತ್ತು ಪ್ರವಾಹದಂತೆ ಹರಿದು ಬಂದ ಹಲವಾರು ವಿಜಯಶಾಲೀ ರಾಷ್ಟ್ರೀಯ ವಿಮೋಚನಾ ಆಂದೋಲನಗಳನ್ನು ತಡೆಯಲು ಶಕ್ತವಾಗಲಿಲ್ಲ. ಯುರೋಪಿನ ಸಮಸ್ತ ಜನಸಮೂಹಗಳು ಫ್ಯಾಸಿಸ್ಟ್ ನೊಗದಿಂದ ವಿಮೋಚನೆಗೊಂಡವು, ಏಷ್ಯಾದ ಮತ್ತು ಆಫ್ರಿಕಾದ ಹಲವಾರು ದೇಶಗಳು ಫ್ಯಾಸಿಸ್ಟ್ ಇಟಲಿ ಮತ್ತು ಸೈನಿಕವಾದಿ ಜಪಾನಿನ ಕಪಿಮುಷ್ಠಿಯಿಂದ ವಿಮೋಚನೆಗೊಂಡವು. 1934-40 ಮತ್ತು 1942-43 ರಲ್ಲಿ ತಮ್ಮ ಹಿಡಿತವನ್ನು ಬಲವಾಗಿ ಇರಿಸಿಕೊಂಡಿದ್ದ ಬ್ರಿಟಿಶರೂ 1947 ರಲ್ಲಿ ಭಾರತವನ್ನು ಬಿಡಬೇಕಾಗಿ ಬಂತು. ಇದರ ಹಿಂದೆನೇ ಹಲವಾರು ರಾಷ್ಟ್ರೀಯ ವಿಮೋಚನಾ ವಿಜಯಗಳು ಕಂಡು ಬಂದವು, ಇದೆಲ್ಲಾ ಫ್ಯಾಸಿಸ್ಟ್ ವಿರೋಧಿ ಜನತಾ ವಿಮೋಚನಾ ಯುದ್ಧವಲ್ಲದಿದ್ದರೆ ಮತ್ತೇನು ?

ನಿಜವಾಗಿ ಕೈಬಿಟ್ಟವರು

ಸರಿ, ಈ ಎಲ್ಲಾ ವಿಷಯಗಳನ್ನು ಅರ್ಥಮಾಡಿಕೊಂಡು, ವಾದ ವಿವಾದ ನಡೆಸಿದಲ್ಲಿ 14 ವರ್ಷಗಳ ಹಿಂದೆ. ಸತ್ಯ, ಪ್ರಾಮಾಣಿಕತೆ ಮತ್ತು ಬೆಲೆ ನೀಡುವುದಾದರೆ ಭಾರತೀಯ ಕಮ್ಯೂನಿಸ್ಟರು, ಅದಕ್ಕಿಂತಲೂ ಹೆಚ್ಚಾಗಿ ಈಗಿನ ಆಳುವ ಪಕ್ಷವಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಂತರಂಗ ಶೋಧನೆ ಮತ್ತು ಗತ ಅವಧಿಯ ಪರಿಶೀಲನೆ ನಡೆಸಬೇಕು. ಏನೇ ಇರಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಒಟ್ಟು ಸಂಖ್ಯಾಬಲ ಕೇವಲ ಐದು ಸಾವಿರದಷ್ಟೂ ಇರಲಿಲ್ಲ. ಆದರೆ ಅತ್ತ ಕಾಂಗ್ರೆಸ್ ಲಕ್ಷಗಟ್ಟಲೆ ಜನರ-ಅದೇಕೆ ಆಗ ಸಮಸ್ತ ರಾಷ್ಟ್ರೀಯ ವಿಮೋಚನಾ ಆಂದೋಲನದ ವಿಶ್ವಾಸ ಹೊಂದಿತ್ತಲ್ಲ ? ನಿಜವಾದ ಸತ್ಯಸಂಗತಿ 'ಕಮ್ಯೂನಿಸ್ಟ್ ವಿಶ್ವಾಸಘಾತ' ವಲ್ಲ, ಕಾಂಗ್ರೆಸ್ ನಾಯಕರು ಭಾರತೀಯ ಸ್ವಾತಂತ್ರ್ಯದ ಮತ್ತು ಜಗತ್ತಿನ ಜನಗಳ ವಿಮೋಚನೆಯ ಧ್ಯೇಯೋದ್ದೇಶಗಳಿಗೆ ದ್ರೋಹಬಗೆದದ್ದು.

ಸಂದರ್ಭದಲ್ಲಿ ಫ್ಯಾಸಿಸ್ಟ್ ವಿರೋಧೀ ಯುದ್ಧ ಪ್ರಯತ್ನಗಳಿಗೆ ಕಮ್ಯೂನಿಸ್ಟರ ಬೆಂಬಲವಾಗಲೀ ಅಥವಾ ಕಾಂಗ್ರೆಸ್ಸಿನ ವಿರೋಧವಾಗಲೀ ಆ ಯುದ್ಧದ ಅದೃಷ್ಟವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿಲ್ಲ ಎಂಬುದು ನಿಜ. ಯುದ್ಧ ಪ್ರಯತ್ನಗಳಿಗೆ ಕಮ್ಯೂನಿಸ್ಟರ ಬೆಂಬಲ ಅವರಿಗೆ "ಬ್ರಿಟಿಶ್ ಚಮಚ" ಗಳು ಮತ್ತು "ಮಾಸ್ಕೋ ಏಜೆಂಟರು" ಎಂಬ ಹಣೆಪಟ್ಟಿ ಹಚ್ಚಿ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ರೊಚ್ಚಿಗೆದ್ದ ಭಾರತೀಯ ಜನತೆಯ ನಡುವೆ ಅಪಪ್ರಚಾರ ನಡೆಸಲು ಕಾಂಗ್ರೆಸ್ ದೇಶಭಕ್ತರಿಗೆ ಬಹಳ ಉಪಯೋಗಕ್ಕೆ ಬಂತು. ಇದರಿಂದ ಅವರು ಸಾಕಷ್ಟು ಪ್ರಯೋಜನ ಕೂಡಾ ಪಡೆದರು. ಆದರೆ "ಕ್ವಿಟ್ ಇಂಡಿಯಾ" ಹೋರಾಟ ಒಂದೇ ವರ್ಷದೊಳಗೆ ಕುಸಿದು ಬಿದ್ದು 1944 ರಿಂದ 1947ರ ವರೆಗೆ ಪೂರ್ಣ ನಾಲ್ಕು ವರ್ಷಗಳ ವರೆಗಿನ ಚೌಕಾಸಿ, ಮಾತುಕತೆ, ವ್ಯವಹಾರಗಳ ನಂತರವೇ ಭಾರತ ಕೋಮು ಆಧಾರದ ಮೇಲೆ ವಿಭಜನೆಗೊಂಡು ರಾಜಕೀಯ ಅಧಿಕಾರ ಭಾರತ ಸಂಘದಲ್ಲಿ ಕಾಂಗ್ರೆಸ್ಸಿಗೂ, ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗ್‌ಗೂ ಹಸ್ತಾಂತರಗೊಳ್ಳುವುದು ಸಾಧ್ಯವಾಯಿತಷ್ಟೆ. 1942 ರ "ಭಾರತ ಬಿಟ್ಟು ತೊಲಗಿ" (ಕ್ವಿಟ್ ಇಂಡಿಯಾ) ಹೋರಾಟದ ನಂತರ ಐದು ವರ್ಷಗಳ ವರೆಗೆ ಬ್ರಿಟಿಶರು ಭಾರತ ಬಿಟ್ಟು ತೊಲಗಲಿಲ್ಲ ಮತ್ತು 1947ರಲ್ಲಿ ಅವರು ತೊಲಗಿದಾಗ ಕೂಡಾ ಭಾರತವನ್ನು ವಿಭಜಿಸಿ, ನಮಗೆ ಹಿಂದೂ-ಮುಸ್ಲಿಂ ಘರ್ಷಣೆಯನ್ನು ಮತ್ತು 'ಒಡೆದು ಆಳುವ' ಅದೇ ಸಾಮ್ರಾಜ್ಯಶಾಹೀ ಆದರ್ಶವನ್ನು ಹೊಸ ಪರಿಸ್ಥಿತಿಯಲ್ಲಿ ಹೊಸ ರೀತಿಯಲ್ಲಿ ಅಳವಡಿಸಿಕೊಳ್ಳುವ ಎರಡು ಸ್ವಾಧೀನ ಪ್ರಭುತ್ವಗಳನ್ನು ಕೊಟ್ಟ ಮೇಲೆನೇ ತೊಲಗಿದರು.

ರಾಜಕೀಯ ಪ್ರಾಮಾಣಿಕತೆ

ಹೌದು ! ಯುದ್ಧದ ಎರಡು ಘಟ್ಟಗಳಲ್ಲೂ —ಅಂತರ ಸಾಮ್ರಾಜ್ಯಶಾಹೀ ಘಟ್ಟ ಮತ್ತು ಫ್ಯಾಸಿಸ್ಟ್ ವಿರೋಧೀ ಘಟ್ಟ- ಮೂಲಭೂತವಾಗಿ ಸರಿಯಾದ ನಿಲುವನ್ನೇ ತಳೆದಿದ್ದ ಸಿ. ಪಿ. ಐ. ಅದನ್ನು ಕಾರ್ಯರೂಪಕ್ಕಿಳಿಸಿದ ಕೆಲವು ಕ್ರಮಗಳಲ್ಲಿ ಗಂಭೀರ ತಪ್ಪುಗಳನ್ನು ಮಾಡಿತು. ಜಾಗತಿಕ ಫ್ಯಾಸಿಸ್ಟ್ ಬಣದ ವಿರುದ್ಧ ಹೋರಾಟದ ಮಾರ್ಗದಲ್ಲಿ ಬ್ರಿಟಿಶ್ ಆಳ್ವಿಕೆಗೆ ಅದರ ವಿರೋಧ ಹರಿತ ಕಳಕೊಂಡಿತು ಫ್ಯಾಸಿಸ್ಟ್ ವಿರೋಧಿ ಯುದ್ಧ ಪ್ರಯತ್ನಗಳಿಗೆ ಅದು ಕೊಟ್ಟ ಬೆಂಬಲಕ್ಕೂ, ಬ್ರಿಟಿಶ್ ಆಳರಸರ ಯುದ್ಧ ಧೋರಣೆಗಳು ಮತ್ತು ಪ್ರಯತ್ನಗಳ ಬೆಂಬಲಕ್ಕೂ ವ್ಯತ್ಯಾಸ ಕಂಡುಬರದಾಯಿತು. ದೇಶಪ್ರೇಮೀ ಜನರಲ್ಲಿ ಬಹಳ ಮಂದಿ ಸಹಜವಾಗಿಯೇ ಅದನ್ನು ಅಪಾರ್ಥ ಮಾಡಿಕೊಂಡರು.

ಆದರೆ ಸಿ. ಪಿ. ಐ. 1948 ರ ಆರಂಭದ ದಿನಗಳಷ್ಟು ಹಿಂದೇನೇ ಕಾರ್ಯತಂತ್ರಗಳಲ್ಲಿ ತಾನು ಮಾಡಿದ ತಪ್ಪುಗಳನ್ನು ನೇರಮಾತುಗಳಲ್ಲಿ ಒಪ್ಪಿಕೊಳ್ಳುವಷ್ಟು ಪ್ರಾಮಾಣಿಕ ಮತ್ತು ಧೈರ್ಯಶಾಲಿಯಾಗಿತ್ತು, 80 ಪುಟಗಳ ಒಂದು ಆತ್ಮ ವಿಮರ್ಶಾತ್ಮಕ ವರದಿಯನ್ನು ಪ್ರಕಟಿಸಿ ದೇಶಾದ್ಯಂತ ಅದನ್ನು ಹಂಚಲಾಯಿತು. ಅದರಿಂದ ಸರಿಯಾದ ಪಾಠಗಳನ್ನು ಕಲಿತು ಅದನ್ನು ಆಚರಣೆಯಲ್ಲಿ ಒಳಗೊಳ್ಳಲಾಯಿತು. ಅವನ್ನೆಲ್ಲಾ ಇಲ್ಲಿ ಪುನರುಚ್ಚರಿಸಬೇಕಾಗಿಲ್ಲ.

ಇಂತಹ ನೈತಿಕ ಧೈರ್ಯ ಮತ್ತು ರಾಜಕೀಯ ಪ್ರಾಮಾಣಿಕತೆಯನ್ನು ಕಾಂಗ್ರೆಸ್ ನಾಯಕರಿಂದಲೂ ನಿರೀಕ್ಷಿಸಿದೆವು. ಆದರೆ ಅವರಾಗಲೀ, ಅವರಿಗಾಗಿ ಲೇಖನಿ ಓಡಿಸುವ ಬುದ್ಧಿಜೀವಿಗಳಾಗಲೀ ಈ ಮಾರ್ಗ ಅನುಸರಿಸುವ ಧೈರ್ಯಮಾಡಲಿಲ್ಲ ಎಂಬುದು ಬಹಳ ವಿಷಾದದ ಸಂಗತಿ. ಆತ್ಮಪರಿಶೋಧನೆಯೆಂದರೆ ಅವರು ಥರ ಥರನೆ ನಡುಗುತ್ತಾರೆ ಮತ್ತು ಆತ್ಮವಿಮರ್ಶೆಯೆಂದರೆ ಮರಣಭಯ ಅವರಿಗೆ. ಕಮ್ಯುನಿಸ್ಟ್ ವಿರೋಧೀ ಅಪಲಾಪ ಮತ್ತು ಆತ್ಮಶ್ಲಾಘನೆಯಲ್ಲೇ ಅವರು ಉದ್ಧಾರ ಹೊಂದ ಬಯಸುತ್ತಾರೆ.

○

ಬೆಂಗಳೂರು

ಫುಟ್ ಪಾತ್ ವ್ಯಾಪಾರಿಗಳ ಸಂಘ ಅಸ್ತಿತ್ವಕ್ಕೆ

ದಿನಾಂಕ 28 6·84 ರಂದು ಬೆಂಗಳೂರಿನ ಫುಟ್ ಪಾತ್ ವ್ಯಾಪಾರಿಗಳು ಅವಿನ್ಯೂ ರಸ್ತೆಯಲ್ಲಿರುವ ಮಾಣಿಕ್ಷ ಧರ್ಗದಲ್ಲಿ ಸಿಐಟಿಯು ಮುಖಂಡರಾದ ಪಿ. ಕೆ. ಸುಬ್ರಮಣಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನೂತನ ಕಾರ್ಯಕಾರಿ ಸಮಿತಿಯನ್ನು ರಚಿಸಿದರು. 27·6·84 ರಂದು ಕಾರ್ಯಕಾರಿ ಸಮಿತಿ ಸಭೆ ಸೇರಿ ಸಂಘದ ಪದಾಧಿಕಾರಿಗಳನ್ನಾಗಿ ಕೆಳಕಂಡವರನ್ನು ಆಯ್ಕೆ ಮಾಡಿದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್ ಎಂ.ಎಲ್.ಎ. ಗೌರವ ಅಧ್ಯಕ್ಷರು, ಶ್ರೀ ಎಸ್. ಎಮ್. ಪ್ಯಾರು ಕಾರ್ಯಾಧ್ಯಕ್ಷರು, ಶ್ರೀ ಪಿ. ಕೆ. ಸುಬ್ರಮಣಿ ಮತ್ತು ಶ್ರೀ ಎ. ಪಿ. ನರಸಿಂಹನ್ ಉಪಾಧ್ಯಕ್ಷರುಗಳು, ಶ್ರೀ ಎ. ವಿ. ರಮೇಶ್ ಕಾರ್ಯದರ್ಶಿ, ಶ್ರೀ ಆರ್. ನಾರಾಯಣ ಖಜಾಂಚಿ.

ಕಾರ್ಯಕಾರಿ ಸಮಿತಿ ಸಭೆಯು ಬೆಂಗಳೂರು ನಗರದ ರಸ್ತೆ ಬದಿಯಲ್ಲಿ ಮತ್ತು ತಳ್ಳುವ ಕೈಗಾಡಿಯಲ್ಲಿ ವ್ಯಾಪಾರ ಮಾಡುವವರಿಗೆ ಪೋಲೀಸ್ ಇಲಾಖೆಯಿಂದ ಆಗುತ್ತಿರುವ ಕಿರುಕುಳವನ್ನು ಕುರಿತು ಚರ್ಚಿಸಿದೆ

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154
Editor : P. Ramachandra Rao
Managing Editor : N. K. Upadhyaya